
"Service of the Poor is the Service of God".

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

A HIGH CLASS RUPEE-MAGAZINE TO SUIT ALL INTERESTS.

ಭಿನ್ನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. [ಬಿಡಿ ಸಂಚಿಕೆ ಆಣೆ ೦—೧—೬.



"ಬಡವರ ಬಂಧು"ವಿನಲ್ಲಿ ಉಚ್ಚ ತರಗತಿಯ ಸಣ್ಣ ಕಥೆಗಳೂ, ಪದ್ಯಗಳೂ, ಧಾರ್ಮಿಕ ನೈತಿಕ ವಿಚಾರಗಳನ್ನೊಳಗೊಂಡ ಲೇಖಗಳೂ ಬರುವುವು. ಪತ್ರವ್ಯವಹಾರ, ಹಾಸ್ಯ, ವಿಮರ್ಶೆ, ಒಗಟು, "ಟಿಟ್‌ಬಿಟ್ಸ್," ಒಳದೇಶವಿದೇಶ ವಾರ್ತೆಗಳೂ ಕೊಡಲ್ಪಡುವುವು.

ಇಂತಹ ಅಮೂಲ್ಯ ಮತ್ತು ಅತೀ ಅಗ್ಗವಾದ ಮಾಸಿಕ ಪತ್ರಿಕೆಯನ್ನು

"ಬಡವರಬಂಧು" ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ತರಿಸಿಕೊಳ್ಳಿರಿ.

ಸಂಪುಟ ೧.	ತಾರೀಕು ೧ನೇ ಅಕ್ಟೋಬರ ೧೯೩೨.	ಸಂಚಿಕೆ ೬.


"ಬಡವರ ಬಂಧು" ಮಹಾತ್ಮಾಗಾಂಧಿಯವರ ಪವಿತ್ರೋಪವಾಸ.

(ನಮ್ಮ ಪ್ರಾರ್ಥನೆ.)

ಸರ್ವಶಕ್ತಿಯುತನಾದ ಪರಮಾತ್ಮನೇ! ಅದೋ ನೋಡು! "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್" ಎಂದು ನೀನಂದು ಭಾಷೆಯಿತ್ತಂತೆ, ಇಂದು ಶಿಷ್ಯಜನ ಪರಿಪಾಲನಾರ್ಥವಾಗಿ ಭೂಮಿಯಲ್ಲವತರಿಸಿರುವ ನೈಜ "ಬಡವರ ಬಂಧು"ವಾದ ಮಹಾತ್ಮಾಗಾಂಧಿಯವರು ಮರಣಾಂತ್ಯ ತನಕದ ಉಪವಾಸದೀಕ್ಷೆಯನ್ನು ಕೈಕೊಂಡಿರುವರು; ಬಡ ಭಾರತೀಯರ ಧರ್ಮ, ಒಗ್ಗಟ್ಟು, ಕರ್ತವ್ಯಗಳಿಗಾಗಿ, ಸ್ಪೃಶ್ಯಾಸ್ಪೃಶ್ಯರೆಂಬ ಭೇದವನ್ನು ಕಲ್ಪಿಸಿ ಇಷ್ಟು ಕಾಲದಲ್ಲೂ ಭಾರತಭೂಮಿಯಲ್ಲಿ ಅತ್ಯಾಚಾರವನ್ನೆಸಗಿದ ಜನಾಂಗದ ಪಾಪಪರಿಹಾರಾರ್ಥವಾಗಿ, ಸ್ವಪ್ರಾಣ ಬಲಿ ದಾನಮಾಡಲು ಕಂಕಣಬದ್ಧರಾಗಿರುವರು. ಭಗವಂತನೇ! ಅವರು ಮಡಿದರೆ ಉಳಿವವರಾರು? ಅವರು ಉಳಿದರೆ ಮಡಿವರಾರು? ಅವರು ತನ್ನೀ ಭೀಷಣ ಪ್ರತಿಜ್ಞೆಯಿಂದಾಗಿ ಮರಣಹೊಂದಿದರೆ ಬಡವರಿಗೆ ಗತಿ ಯಾರು? ಮಾತಾಪಿತರನ್ನು ಕಳೆದುಕೊಂಡ ಬಡಮಕ್ಕಳ ಸ್ಥಿತಿಯೇನು? ಸ್ವಾಮಿ, ಬಾಪೂಜೀಯವರನ್ನಂತ್ಯಗೊಳಿಸಬೇಡ! ನಿನ್ನಾಣೆ ಬೇಡ! ನಮ್ಮ ಇಷ್ಟರ ತನಕದ ಪಾಪಕ್ಕೆ ಪ್ರಾಯಶ್ಚಿತ್ತವನ್ನನುಭವಿಸುವೆವು. ಇನ್ನು ಮುಂದಕ್ಕೆ ಅಸ್ಪೃಶ್ಯರನ್ನು ನಮ್ಮ ಬಾಂಧವರೆಂದು ತ್ರಿಕರಣ ಶುದ್ಧಿಯಿಂದ ಪ್ರೀತಿಸುವೆವು. ಅವರ ಪ್ರವೇಶಕ್ಕಾಗಿ ನಮ್ಮ ದೇವಸ್ಥಾನಗಳ ಬಾಗಿಲುಗಳು ತೆರೆದಿಡಲ್ಪಡುವುವು. ನಮ್ಮ ಕೆರೆಕುಂಟೆ ಬಾವಿಗಳನ್ನು ನಮ್ಮಂತೆಯೇ ಅಸ್ಪೃಶ್ಯರೂ ಉಪಯೋಗಿಸುವಂತಹ ಅಧಿಕಾರವನ್ನು ಸಂತೋಷದಿಂದ ಸದಾ ಕಾಲಕ್ಕೂ ಕೊಡುವೆವು. ಭೇದವನ್ನು ಸಂಪೂರ್ಣ ಮರೆಯುವೆವು. ಬಡವರು, ಧನಿಕರೆಂಬ ಭೇದಾಭೇದ ಪಿಶಾಚಿಯನ್ನು ಸಂಹರಿಸುವೆವು. ಹಿಂಸೆ, ಅಸತ್ಯ, ದ್ವೇಷಗಳನ್ನು ತ್ಯಜಿಸುವೆವು. ಅಂತೂ ನಮ್ಮ ಮಹಾತ್ಮನ ಪ್ರಾಣವನ್ನುಳಿಸಿಕೊಡು! ಆಳರಸರು ಅವರ ಕೇಳಿಕೆಗಳಿಗೊಪ್ಪುವಂತೆ ಪ್ರೇರೇಪಿಸು! ಅಸ್ಪೃಶ್ಯರ ಪ್ರತಿನಿಧಿಗಳ ಕಠೋರ ಮನಃಶಿಲೆಯು ನಿನ್ನ ವರಬಲದ ತಂಗಾಳಿಯಿಂದ ಕರಗಿ ನೀರಾಗಲಿ! ವಂಚನೆ, ಸ್ವಾರ್ಥ ದಂಭಗಳು ಮಾಯವಾಗಲಿ! ದೇಶದಲ್ಲಿ ಸಂಪೂರ್ಣ ಶಾಂತಿಯುಂಟಾಗಲಿ! ಹಾಗೂ ಬಾಪೂಜೀಯನ್ನು, ನೈಜ ಸಾಧುವನ್ನು, ನೈಜ ಬಡವರ ಬಂಧುವನ್ನು ಈ ವಿಪ್ಲವದಿಂದ ಪಾರಗಾಣಿಸು. ನಿನ್ನ ಕರುಣೆಯು ನಮ್ಮ ಮೇಲಿರಲಿ—ಶರಣು, ಶರಣು, ಶರಣು.

ಓಂ ಶಾಂತಿ! ಶಾಂತಿ! ಶಾಂತಿ!

"BADAVARA BANDHU"



ಸಂಪುಟ ೧. | ತಾರೀಕು ೧ನೇ ಅಕ್ಟೋಬರ ೧೯೩೨. | ಸಂಚಿಕೆ ೬.

ಬಡತನ.

ಲೇಖಕರು:-ಶ್ರೀ. ಜಿ. ಪಿ. ರಾಜರತ್ನಂ, M. A. ಮೈಸೂರು.

ಜ. ಕ.

೧

ಬಡವರಾವು! ಬಡವರಾವು!
ಬಡವರಲ್ಲ–ಧನಿಕರಾವು!
ನಮ್ಮ ಧನಂ
ಬಡತನಂ!

ಗುಂಡು ಗುಂಡು ಗುಂಡು ಗುಂಡು
ಸೊನ್ನೆಗಳಿಂದಿಡಿದ ಧನಂ–
ನಮ್ಮ ಧನಂ
ಬಡತನಂ!

ಮೇರುವಿನಿಂ ಮೇರುವರಂ
ಇಡೀ ವಿಶ್ವದಗಲದೊಳಂ
ಹಂಚಲಿಹುದು ನಮ್ಮ ಧನಂ!
ನಮ್ಮ ಧನಂ
ಬಡತನಂ!

ಧನಿಕನಿಟ್ಟ ಕಟ್ಟಿನಲ್ಲಿ
ಹೊರಕೆ ಹೊರಡದೊಂದು ಕಾಸು!
ಕೈಯನೆತ್ತಿ ಕೊಡುವರಾವು
ಕೊಳುವ ಗಂಡರೆಲ್ಲ ಬನ್ನಿ!
ಪಿಳ್ಳೆಯೊಂದಕಿಲ್ಲವೆನ್ನೆವು
ಬನ್ನಿ! ಬನ್ನಿರೆಲ್ಲ ಬನ್ನಿ!

ಕಳ್ಳಕಾಕರೆತ್ತಲಾರ
ದೆತ್ತಲಮ್ಮದೆಮ್ಮ ಧನಂ!
ವೆಚ್ಚಮಾಡಲಷ್ಟಕಷ್ಟು
ಹೆಚ್ಚುತ್ತಿರುವ ನಮ್ಮ ಧನಂ!
ನಮ್ಮ ಧನಂ
ಬಡತನಂ!

ಬನ್ನಿ! ಬನ್ನಿರೆಲ್ಲ ಬನ್ನಿ!

ಶೂನ್ಯದಿಂ
ಸೊನ್ನೆವರಂ
ಬೇಡಿದುದನು ಕೊಡುವರಾವು!
ನಮ್ಮ ಧನಂ
ಬಡತನಂ!

ಬನ್ನಿ! ಬನ್ನಿರೆಲ್ಲ ಬನ್ನಿ!
ನಮ್ಮ ಧನಂ
ಬಡತನಂ

೨

ಹೊಂದಿರಲುದಾತ್ತಭಾವಂ
ಬಡತನಮೆ ದುಷ್ಪದಾವಂ!
ಏನೆ ಬಂದರು ಬರಲಿ
ಏನೆ ಬಂದರು ಬರಲಿ

ಬೇಡವೀ ಬಡತನದ ಬೇಗೆ!
ದಾರಿಯಾವುದೊ ಇದನು ನೀಗೆ!
ಬಡತನಮುದಡಸಿರಲ್ಕೆ
ಹಿರಿತನಮುದಾಳ್ತನಕ್ಕೆ!

ಮನಸು ನುಡಿ ನಡೆಗಳೊಳು
ಸ್ವಾತಂತ್ರ್ಯವುಡುಗಿರಲು
ಬೇಡವೀ ಬಡತನದ ಬೇಗೆ!
ದಾರಿಯಾವುದೊ ಇದನು ನೀಗೆ!
ಬಡತನವು ಹುಲಿಯ ದಾಡೆ!
ಬಡತನವು ಹಿರಿಯ ಪೀಡೆ!

ಬಡತನಕೆ ಸರಿಮಿಗಿಲು
ಇಲ್ಲ–ಹಗಲೇ ಹಗಲು!
ಘೋರವೀ ಬಡತನದ ಬೇಗೆ!
ಸಾವೊಂದೆ ದಾರಿಯಿದ ನೀಗೆ!

ಎಲ್ಲಿರುವೆ ದೇವ?

ಲೇ.:– ಶ್ರೀ. ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದ,
ಮುಂಬಾಯಿ.

ಎಲ್ಲೀಗ ನೀನಿರುವೆ?
ಎಲ್ಲಿ ಕಾಣಲು ಸಿಗುವೆ?
ಎಲ್ಲಿ ನಾನಲೆದು ನಿನ ಪದವ ಕಾಣ್ಬೆ?
ಕಲ್ಲ ವಿಗ್ರಹ ಪೂಜೆ
ಸಲ್ಲಿಸುತ ನಿನಗಾಗಿ
ಎಲ್ಲೆಲ್ಲಿ ತಿರುಗಿದೆನು ಅಲ್ಲಿರುವೆಯೆಂದು
ಅಲೆದೆನಾ ಕ್ಷೇತ್ರಾದಿ
ಗಳ ಸಂಚರಿಸಿ, ಯಾತ್ರೆ
ಯಲಿ ತೊಳಲಿ ಬಳಲಿದೆನು ನಿನ್ನ ಕಾಣಲ್
ಎಲ್ಲಿಯೂ ಸೆಳೆಯುಳ್ಳ
ಕಳೆಯು ನಾ ಕಾಣದೆಯೆ
ಬಳಲಿ ಸೇರಿದೆ ಬಲ್ಲಿದರ ಚರಣವ.
ಎಲ್ಲವನು ಬಲ್ಲವರು
"ಎಲ್ಲಿಯೂ ಇರುವನವ
ಇಳೆಯಲ್ಲಿ ಸರ್ವತ್ರ ವ್ಯಾಪಿಯವನು
ಬಲವಂತ ಗುಣವಂತ
ಹಲವಿಧದಿ ಕರುಣಾಳು
ಇಲ್ಲವವಗಳತೆ"ಯೆಂದೆಂಬರವರು
ಇಲ್ಲವೈ ನೀನಿಲ್ಲ
ದಿಲ್ಲೆಡೆಯು, ನಿನ್ನನ್ನು
ಅಲ್ಲಲ್ಲಿ ಏಕಿಂತು ಹುಡುಕಲ್ಕೆ ದೇವ?
ಎಲ್ಲೆಲ್ಲಿ ನೆಲೆಯಾಗಿ
ನಿಲುವವನು ನೀನೆನ್ನ
ಒಳಗಿರುವೆ ಹೃದಯ ಮಂದಿರದಿ ನಿರತ

Talk happiness.—The world is sad enough without our woes.

"ಬಡವರ ಬಂಧು" ಅಥವಾ ಮಹಾತ್ಮಾ ಗಾಂಧಿ.

ಸಂಪಾದಕೀಯ.

ನಾಳೆ (೨-೧೦-'೩೨) **'ಬಡವರ ಬಂಧು'**ವಾದ **ಮಹಾತ್ಮಾ ಗಾಂಧಿ**ಯವರ ಜನನ ತಿಥಿ. ಇಂಗ್ಲಿಷ್ ಕಾಲಗಣನೆಯಂತೆ, ನಾಳೆ ಅವರು ತಮ್ಮ ೬೩ನೇ ವರ್ಷ ಪ್ರಾಯವನ್ನು ದಾಟುವರು.

ಗಾಂಧಿಜೀಯವರೆಂದರೆ ರಾಜಕೀಯದೊಡನೆ ಅಧ್ಯಾತ್ಮಿಕ ವಿಚಾರವನ್ನು ಜನತೆಗೆ ಪ್ರಚುರಿಸಲು ಜನಿಸಿದ ಮಹಶ್ಶಕ್ತಿ—ಭಗವದ್ಗೀತೆ, ಕ್ರೈಸ್ತಬೋಧೆ, ವೇದಶಾಸ್ತ್ರ ಪುರಾಣಗಳ ಗೂಢಾರ್ಥಗಳನ್ನು ಅಜ್ಞಾನ ತಿಮಿರದಲ್ಲಿ ಮರೆಯಾಗಿರುವ ಜನಾಂಗಕ್ಕೆ ಸಾರಲು ಬಂದ ಉಜ್ವಲವ್ಯಕ್ತಿ. ಬಡವರ ದಣು, ದರಿದ್ರರ ದಾರಿದ್ರ್ಯಗಳನ್ನು ತನ್ನಿಂದಾದಷ್ಟು ಮಟ್ಟಿಗೆ ನಿವಾರಿಸಲು ಪ್ರಾಣವನ್ನೇ ಕೈಯಲ್ಲೆತ್ತಿ ಹಿಡಿದ ಮಹಾತ್ಮ. ದೀನರ ಅನಿರ್ವಚನೀಯ ಕಷ್ಟಪರಂಪರೆಗಳನ್ನು ಕಂಡು, ಅವರನ್ನುದ್ಧರಿಸಬೇಕೆಂದು ಬಗೆದು ತನ್ನ ಸರ್ವಸ್ವವನ್ನೂ ತ್ಯಾಜ್ಯಮಾಡಿದ ಅಪ್ರತಿಹತ ಬಂಧು;—ಸತ್ಯಯುಗದ ಅವತಾರಪುರುಷ;—ಅರೆಬತ್ತಲೆಯ ಫಕೀರ;—ರಾಜಕೀಯಕ್ರೈಸ್ತ,—ಜೀವನ್ಮುಕ್ತ;— ಸಬರ್ಮತಿಸಾಧು;—ಸತ್ಯಾಗ್ರಹಕರ್ತೃ;—ಸಹನಾಮೂರ್ತಿ;—ತತ್ವಜ್ಞಾನಿ;—ಬಡವರ ಬಂಧು. ಅವರ ಜೀವಿತ ದಿನಗಳಲ್ಲಿ ಬದುಕಿ ಬಾಳಿ, ಅವರ ತಾತ್ವಿಕತೆಯ ಮಹಾತ್ಮೆಯನ್ನು ತಿಳಿಯಲು ಸಮರ್ಥನಾದವನೇ ಸರ್ವ ಸಮರ್ಥ. ಅವರ ಪಾವನ ಜೀವನಚರಿತ್ರೆಯನ್ನು ಶೃದ್ಧಾಭಕ್ತಿಗಳಿಂದ ವಿಮರ್ಶಿಸಿ, ತಿಳಿದುಕೊಂಡವನೇ ಮಹಾಜ್ಞಾನಿ.

೧೮೬೯ನೇ ಇಸವಿ ಅಕ್ಟೋಬರ ೨ನೇ ಮುಂಜಾನೆ ಗುಜರಾಥಿನ ಕಾಥಿಯಾವರ್ ಪಟ್ಟಣದ ಪೋರ್ ಬಂದರ್ ಎಂಬಲ್ಲಿ ಮಹಾತ್ಮರು ಸತ್ಕುಲದಲ್ಲಿ ಜನಿಸಿದರು. ದೈವಭಕ್ತರಾದ ಮಾತಾಪಿತರ ಪೋಷಣೆಯಿಂದ ಬೆಳೆದು, ಶಾಲಾದಿನವನ್ನು ಅಂಜುಬುರುಕನಂತೆ ಕಳೆದು ಹಲ ಕೆಲವು ಸನ್ನಿವೇಶಗಳ ಸಮಾಗಮದಿಂದಾಗಿ ಅವರು ದೇಶವಿದೇಶಗಳಲ್ಲಿ ವಿದ್ಯಾರ್ಜನೆ ಮಾಡಿ ಕೀರ್ತಿಯುತರಾದರು.

ಪೋರ್ ಬಂದರಿನಲ್ಲಿ ಒಂದು ಕಂಪೆನಿಯ ಶಾಖೆಯೊಂದು ಆಫ್ರಿಕದ ಪ್ರಿಟೋರಿಯಾ ಎಂಬಲ್ಲಿದ್ದು, ಗಾಂಧಿಯವರು ಆ ಶಾಖೆಯ ಒಂದು ವ್ಯವಹರಣೆಯ ಸಂಬಂಧವಾಗಿ ಆಫ್ರಿಕಕ್ಕೆ ತೆರಳಿದರು. ಅಲ್ಲಿ ಹಿಂದೀಯ ಜನಾಂಗದ ಕಡೆಗೆ ಆಂಗ್ಲೇಯರು ತೋರಿಸುತ್ತಿದ್ದ ದೌಷ್ಟ್ಯದಿಂದ ಅವರೆದೆಯೊಡೆಯಿತು. ಬಡವರ ಸಲುವಾಗಿ ಅನೇಕ ಸಲ ಬಂಧನಕ್ಕೊಳಗಾದರು. ಸತ್ಯಾಗ್ರಹವನ್ನಾರಂಭಿಸಿದರು. ಪ್ರಾಣವನ್ನೇ ಕಳೆದುಕೊಳ್ಳುವ ಪ್ರಸಂಗವೂ ಅವರಿಗೆ ಬಂದಿತ್ತು.

ಹಿಂದೂದೇಶದಲ್ಲಿ ಅವರು ಮಿ। ರೌಲೆಟ್ಟರ ರೌಲೆಟ್ ಆಕ್ಟ್ ಎಂಬುದನ್ನು ನಿರೋಧಿಸಿ, ಪ್ರಚಂಡ ಚಳವಳವನ್ನು ಹೂಡಿ, ಅನೇಕ ತಾಪತ್ರಯಕ್ಕೊಳಗಾದರು. ಸಂಪೂರ್ಣ ಸ್ವದೇಶೀ, ಸಂಪೂರ್ಣ ಅಹಿಂಸಾಪರತೆ ಮತ್ತು ಸಂಪೂರ್ಣ ತ್ಯಾಗವನ್ನು ಸಮಸ್ತ ಹಿಂದೀಯರಿಗೂ ಬೋಧಿಸಿದರು. ಕೆಲವು ಸಲ ಬಂಧೀಖಾನೆಯನ್ನು ಸೇರಿ ವಿಶ್ರಾಂತಿ ಪಡೆದರು.

೧೯೩೦ನೇ ಇಸವಿಯಲ್ಲಿ ಉಪ್ಪಿನ ಕರೋಲ್ಲಂಘನೆಯನ್ನು ಮಾಡಿ ೬೦ರಿಂದ ೮೦ ಸಾವಿರದಷ್ಟು ಹಿಂದೀಯರು ಶ್ರೀ ಕೃಷ್ಣನ ಜನ್ಮಗೃಹದಲ್ಲಿ ದಿನಹರಣೆ ಮಾಡಲು ಕಾರಣೀಭೂತರಾದರು. ಕೊನೆಗೆ ಸರಕಾರವು ತನ್ನ ಕೇಳಿಕೆಗಳಿಗೊಪ್ಪಲು ಮನಸ್ಸುಮಾಡಿದುದನ್ನು ನೋಡಿ, ಗಾಂಧಿ-ಅರ್ವಿನ್ ಸಂಧಿ ಎಂಬ ಪ್ರಖ್ಯಾತ ತಹನಾಮೆಯನ್ನು ಸಾಮ್ರಾಜ್ಯ ಸರಕಾರದೊಡನೆ ಮಾಡಿಕೊಂಡು, ಬ್ರಿಟಿಷರೊಡನೆ ರಾಜಕೀಯ ರಂಗದಲ್ಲಿ ಸಹಕರಿಸಿ ನಡೆಯಲು ಲಂಡನಿನ ವರೆಗೂ ಹೋದರು. ಆದರೆ ಆ ಸಹಕಾರದಿಂದ ಪ್ರಯೋಜನವಾಗದೆ, ಅವರು ಪುನಃ ಸೆರೆಮನೆಯನ್ನು ಸೇರಿದರು.


ಮಹಾತ್ಮಾ ಗಾಂಧಿಯವರು ತನ್ನ ಸರ್ವ ಜೀವಮಾನವನ್ನೇ ಬಡವರ ವಿಷಯಕವಾದ ಸಮಸ್ಯೆಗಳಿಗೆ ಧಾರೆಯೆರೆದವರು. ಅವರು ಎಂತಹ ಚಳವಳವನ್ನೇ ಹೂಡಲಿ, ಅವರ ಕಾರ್ಯಕ್ರಮವು ಯಾವ ಯಾವ ವಿಧದ್ದೇ ಆಗಿರಲಿ, ಅವರು ನಿಜವಾದ ಬಡವರ ಬಂಧುವೆಂಬುವುದಕ್ಕೆ ತಿಲಾಂಶ ಸಂಶಯವೂ ಇರಲಾರದು. ಎಷ್ಟರತನಕ ಧರಣೀತಲದಲ್ಲಿ ಬಡವರಿರಬೇಕಾಗುವುದೋ, ಎಷ್ಟರ ತನಕ ಐಶ್ವರ್ಯ ಮದ, ಬಲಮದ ಮತ್ತು ಅಜ್ಞಾನಮದಗಳು ಭೂಮಿಯ ಜನರಲ್ಲಿರುವುದೋ ಅಷ್ಟರತನಕ ಮಹಾತ್ಮಾ ಗಾಂಧಿಯವರ ಪವಿತ್ರ ನಾಮವು ಭೂಮಿಯಲ್ಲಿ ಸ್ಥಿರವಾಗದಿರದು.

ಅಂತಹ ಧೀನಬಂಧುಗಳಾದ ಗಾಂಧಿಜೀಯವರ ಜನ್ಮದಿನಾಚರಣೆಯನ್ನು ಪ್ರತಿಯೋರ್ವ ಹಿಂದೀಯನೂ ಶ್ರದ್ಧೆಯಿಂದಾಚರಿಸುವುದು ಧರ್ಮವಿರುತ್ತದೆ. ಅಂದಿನ ದಿನ


ಸ್ವದೇಶೀ ಪ್ರಚಾರವನ್ನು ಮಾಡಬಹುದು;
ಸ್ಪೃಶ್ಯಾಸ್ಪೃಶ್ಯ ಭೇದವನ್ನು ಮರೆಯಲು ದೃಢೀಕರಿಸಬಹುದು;
ದೇಶದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಪ್ರಾರ್ಥಿಸಬಹುದು;
ಸತ್ಯಶೋಧನೆಯನ್ನು ಮಾಡಲು ನಿರ್ಧರಿಸಬಹುದು.

ಎಷ್ಟರತನಕ ಜನರು ಸ್ವದೇಶೀ ವ್ರತಧಾರಿಗಳಾಗುವುದಿಲ್ಲವೋ, ಎಷ್ಟರತನಕ ಅಸ್ಪೃಶ್ಯತಾ ನಿವಾರಣೆಯಾಗುವುದಿಲ್ಲವೋ, ಎಷ್ಟರತನಕ ಬಡವರ ಸುಲಿಗೆಯು ಧನಿಕರಿಂದ ನಡೆಯುವ ಪದ್ಧತಿಯು ನಿಲ್ಲುವುದಿಲ್ಲವೋ ಎಷ್ಟರತನಕ ಜನರು ಧಾರ್ಮಿಕ ಪಥದಲ್ಲಿ ಸುಸಂಸ್ಕೃತರಾಗುವುದಿಲ್ಲವೋ, ಅಷ್ಟರತನಕ, ಆ ವೇಳೆಯ ವರೆಗೆ ಸ್ವರಾಜ್ಯವಿಲ್ಲ. ಇವುಗಳನ್ನು ಸಾಧಿಸಲು ಯತ್ನಿಸುತ್ತಿರುವ ಬಾಪೂಜೀಯು ಆಯುರಾರೋಗ್ಯ ಸಂಪನ್ನರಾಗಲಿ! ಜಗಜ್ಜನನಿಯು ಅವರನ್ನು ಆಶೀರ್ವದಿಸಲಿ!

A man's real bigness is determined by the size of his heart.



ಲೇ: “ಮ. ಜಾ.”



ಹೊಂಡವನ್ನೊಂದು ಮುಚ್ಚಿಸಿ ಬಿಡಲಾಗಲಿಲ್ಲವಲ್ಲ!”

“ಆಯಿತು, ನಾಳೆ ಮಾಲಿಂಗನನ್ನು ಕರತರುತ್ತೇನೆ.”

“ನಾಳೆ! ನಿಮ್ಮ “ನಾಳೆ”ಯು ಬರುವುದೇ ಇಲ್ಲ.”

“ನಾಳೆ ಖಂಡಿತ ಕರತರುತ್ತೇನೆ.”

“ನನಗೆ ದಿನಾಲೂ ಭಯವಾಗುತ್ತದೆ; ಶಿವರಾಮು ಹೋಗುವುದೇ ಅದರ ಬಳಿ.”

“ಅದರಲ್ಲಿ ತುಂಬಾ ನೀರುಂಟಲ್ಲ; ಮಳೆ ಸ್ವಲ್ಪ ನಿಲ್ಲಲಿ–ಮುಚ್ಚಬಹುದು.”

“ಬೇಡ ಬೇಡ! ಅದನ್ನು ನಾಳೆಯೇ ಮುಚ್ಚಿಸಬೇಕು!!”

“ಅದು ಎಷ್ಟು ಆಳವಿದೆ? ಒಂದಾಳು ಇದೆಯೇ?”

“ಒಂದಾಳು! ಬರೇ ಎರಡು—ಮೂರಡಿ—ಅಷ್ಟೇ!”

“ಆಯಿತು, ನಾಳೆ ಮುಚ್ಚಿಸುವ.”

“ಶಿವರಾಮೂ, ಆ ಹೊಂಡದ ಬಳಿ ಹೋಗಬೇಡ ತಿಳಿಯಿತಪ್ಪಾ? ಅಲ್ಲಿ ಗುಮ್ಮ ಇದ್ದಾನೆ! ಹೊಂಡದ ಬಳಿ ಹೋಗಬೇಡ, ಅಮ್ಮ ಸರಿಯಾಗಿ ಹೊಡೆಯುತ್ತಾಳೆ! ಏನು?”

“ನಾನು ಓಗುದಿಲ್ಲ ಅಪ್ಪಾ. ಅಮ್ಮ ಓಗೋದು.”

“ನೀನು ಹೋಗಬೇಡಾ. ಇಲ್ಲಿ ಬಾ. ಅಪ್ಪನಿಗ್ಹೊಂದು ಮುದ್ದುಕೊಡು.”

“ಒಂದು—ಒಂದು—ಒಂದೇ! ಇರಲಿ!”

“ಹೂಂ—ಹೂಂ”

“ಒಂದು! ಒಂದು!”

ಪುಟ್ಟ ಶಿವರಾಮುನು ತಂದೆಯ ಕೊರಳನ್ನು ಬಿಗಿದಪ್ಪಿ ಪ್ರೇಮಪೂರಿತ ಕೋಮಲಾಧರಗಳಿಂದ ಅವನ ಒರಟು ಕಪೋಲವನ್ನು ಮುದ್ದಿಸುವನು. ರಘುನಾಥನ ದೇಹಾಂತರದಲ್ಲಿ ನಿಮಿಷ ಮಾತ್ರ ಹರಿದಾಡಿದ ಪ್ರೇಮತಂತಿಯು ಅವನನ್ನು ಮಹದಾನಂದತುಂದಿಲನನ್ನಾಗಿ ಉತ್ಸಾಹದಿಂದ ಉಬ್ಬಿದಂತಹವನನ್ನಾಗಿ ಮಾಡಿತು. ಮಮತಾನುರಾಗದಿಂದ ಪ್ರಿಯ ಕಂದನನ್ನು ಪುನಃ ಪುನಃ ತಬ್ಬಿಕೊಂಡನು.

“ಅಪ್ಪ, ನಂಗೆ ಗಾಡಿ—,”

“ಆಯಿತು, ರಾಮೂ ತರೋಣ.”

“ನಾಳೆ ತರಲೇಬೇಕು.”

“ನಾಳೆಯೇ ತರುತ್ತೇನೆ. ರುಕ್ಮಳಿಗೆ ತರುವುದಿಲ್ಲ. ನಿನಗೇನೇ! ಏನು?”

“ಆಯಿತಲ್ಲ? ಆದೀತಲ್ಲ? ಒಳ್ಳೇ ಅಪ್ಪಾ, ಅಪ್ಪಾ—ಒಳ್ಳೆ ಅಪ್ಪಾ, ರುಕೂಗೆ ಇ—ಲ್ಲಾ, ನಾಳೆ ಗಾಡಿ ಬರುತ್ತಾದೆ . . . . ಆಡಬೇಕೂ.”

ಶಿವರಾಮುನು ಸಂತೋಷದಿಂದ ಉಬ್ಬಿದನು–ಉಕ್ಕಿ ಉಕ್ಕಿ ಬರುವ ಮನಾನಂದದಿಂದ ಹಾರಿ ಹಾರಿ, ಕುಣಿಕುಣಿದು, ನಲಿದಾಡಿದನು. ಪ್ರಪಂಚಲಾಭವೇ ಆದಂತೆ ಅವನಿಗೊಮ್ಮೆ ಭಾಸವಾಯಿತು. ತನ್ನ ಬಹು ಕಾಲದ ಹಂಬಲವೊಂದು ಮುಗಿಯುವುದೆಂಬ ಭಾವನೆಯು ಅವನನ್ನು ಪರಮಾನಂದ, ಚಿತ್ತಾನಂದಮಯನನ್ನಾಗಿ ಮಾಡಿತು. ಅಪ್ಪನ ಭಾಷೆಯು ನಿತ್ಯದಂತೆ ನಿರ್ಧಾರಪೂರ್ವಕವಾದುದಲ್ಲವೆಂದು ಆ ಪುಟ್ಟುವಿಗೇನು ಗೊತ್ತು? ಅರೆನಿಮಿಷದಲ್ಲಿ ಅವನು ಯಾವುದೋ ಒಂದು ಗಾಡಿಯ ಗೊಂಬೆಯ ಚಿತ್ರವನ್ನು ಮನಸ್ಸಾ ಪ್ರತಿಬಿಂಬಿಸಿಯೂ ಆಯಿತು; ಅದನ್ನು ಓಡಿಸಿ, ಎಳೆದು ಆಡಿ, ರುಕೂಗೆ ಹೀಯಾಳಿಸಿಯೂ ಆಯಿತು.

ಮಕ್ಕಳ ನಿರ್ಮಲಾಂತಃಕರಣದ ಸಂಕುಚಿತತೆಯಲ್ಲಡಗಿರುವ ಆನಂದದಾಳವನ್ನು ಯಾವ ಮಾನದಲ್ಲಿ ಅಳೆಯುವುದು? ಮುದ್ದು ಮುದ್ದು ಮಗು; ತೊಂಡೆ ಹಣ್ಣೊಂದು ತುಟಿಗಂಟಿಕೊಂಡಿದೆಯೋ ಎಂದು ಕಂಡವರೆನ್ನುವ ಮೃದು ಅಧರ; ಗಿಳಿಯ ಕೊಕ್ಕಿನಂತಹ ಸುಂದರ ನಾಸಿಕ, ಮಸಿಯಿಂದೆಳೆಯಲ್ಪಟ್ಟಂತಹ ಎರಡು ಕಪ್ಪಗಿನ ಚಿಕ್ಕ ಕಾಮನ ಬಿಲ್ಲುಗಳಂತಹ ಸೊಬಗಿನ ಹುಬ್ಬು, ವಿಶಾಲವಾದ, ಲಕ್ಷಣಯುಕ್ತವಾದ ಹಣೆ; ತೇಜೋರಾಶಿಯಿಂದ ಬೆಳಗುವ ಶುಭ್ರ ವದನ; ಸುರುಳಿಸುರುಳಿಯಾದ ಕೆಂಗೂದಲು, ಮರಿಹಂಸದಂತೆ ಚಿತ್ತಾಕರ್ಷ ಕೊರಳು; ಅಂತೂ ಶರೀರ ರಚನಾಕಾರ್ಯದಲ್ಲಿ ಭಗವಂತನು ತನ್ನ ಸಕಲ ಕಲಾಶಕ್ತಿಪ್ರಭೆಯನ್ನುಪಯೋಗಿಸಿರುವನೋ ಎಂದು ನೋಡದವರೆನ್ನಲು ಎಡೆಗೊಡುವ, ಸೌಂದರ್ಯಾತಿಶಯದ ಸುಕೋಮಲಾಂಗಾಂಗಗಳಿಂದೊಪ್ಪುವ ದೇಹಾಕೃತಿ—ಸಣ್ಣ ಬಿಳೀ “ಚಡ್ಡಿ”ಯೊಂದನ್ನು ಧರಿಸಿ ಶಿವರಾಮುನು ನಿಂತುಬಿಟ್ಟನೆಂದರೆ, ಕಲೆಯ ಅಲ್ಪ ರುಚಿಯನ್ನರಿಯ ಕಲಿತ ಆವ ವ್ಯಕ್ತಿಯೂ ಅವನನ್ನು ಒಂದರೆಕ್ಷಣ ಕಣ್ಣಿಟ್ಟು ನೋಡಿ ಸೊಬಗಿನ ಸುಖವನ್ನನುಭವಿಸದಿರುತ್ತಿದ್ದಿಲ್ಲ.

“ಅಮ್ಮ ನಂಗೆ ಅಪ್ಪ ಗಾಡಿ ತರುತ್ತಾರೆ.”

“ಆಯಿತು, ಚೆನ್ನಾಯಿತು.”

“ಅಮ್ಮ ರುಕೂಗೇ ಇಲ್ಲಾ, ನೀನು ಕೊಡಬಾರದು.”

“ಆಯಿತಪ್ಪಾ ಆಯಿತು.”

“ಅಪ್ಪಾ ನಿಜಾ ತರುತ್ತಾರೆ.”

“ಆಯಿತು, ಬರಲಿ, ನೀನೇ ಆಡು. ಹೋಗು, ಹೊರಗೆ ಹೋಗಿ ಆಡು.

× × × × ×

ರಾತ್ರೆ ಎಲ್ಲರೂ ನಿದ್ದೆಹೋಗಿದ್ದರು. ಹೊರಗಿನಿಂದ ಮಳೆಯು ಬರುತ್ತಿತ್ತು. ಕಪ್ಪೆಗಳು ಟರಟರಗುಟ್ಟುತ್ತಿದ್ದುವು.

ಸುಂದರಿಯ ಬಳಿ ಮಲಗಿದ್ದ ಶಿವರಾಮುನು ತಟ್ಟನೆ ಬೆಚ್ಚಿ ಬಿದ್ದು ಎಚ್ಚತ್ತ!—ಕೂಗಿದ. ಕತ್ತಲೆಯನ್ನು ಕಂಡು “ಅಮ್ಮಾ, ಅಮ್ಮಾ” ಎಂದು ಎದ್ದು ಅರ್ಭಟಿಸಿದ. ಆದರೆ ಅಮ್ಮನೂ ಏಳಲಿಲ್ಲ; ಅಪ್ಪನಿಗೂ ಕೇಳಲಿಲ್ಲ. ಶಿವನು ಎದ್ದುಕೊಂಡ. ನಿದ್ದೆಯ ಮಬ್ಬಿನಿಂದಾಗಿ ಯಾವುದೂ ಕಾಣಲಾರದು. ಕನಸ್ಸಿನಲ್ಲೆಂಬಂತೆ ಮುಂದೆ ಮುಂದಕ್ಕೆ ಹರಿದಾಡಿದ—ನಡೆದ. ಇನ್ನೊಂದು ಕೋಣೆಗೆ ಹೇಗೋ ನುಗ್ಗಿದ. ಪಾತ್ರೆಗಳ ಸಾಲಿನ ಮೇಲೆ ಕಾಲ್ತಪ್ಪಿ ಧೊಪ್ಪನೆ ಬಿದ್ದುಬಿಟ್ಟ—ಪುನಃ ಅರ್ಭಟಿಸಿದ.

ಸುಂದರಿಗೆ ಫಕ್ಕನೆ ಎಚ್ಚರವಾಯಿತು. ಕಣ್ಣೊರಸಿ ಗಂಡನ ತಲೆಯ ಬಳಿಯಲ್ಲಿದ್ದ ವಿದ್ಯುತ್ ದೀಪವನ್ನು ತೆಗೆದು ಚಕಕ್ಕನೆ ಬೆಳಗಿಸಿದಳು. ಶಿವರಾಮುನು ಅಡಿಗೆ ಕೋಣೆಯಲ್ಲಿ ಕೂಗುವುದು ಕೇಳಿಸಿತು. ಅಸ್ತವ್ಯಸ್ತವಾಗಿದ್ದ ಸೀರೆಯನ್ನು ಎತ್ತಿಕೊಂಡು ಎದ್ದು ಅವಸರದಿಂದ ದಿಗಿಲಿನಿಂದ ಒಳಗೆ ಓಡಿದಳು. ನೋಡುತ್ತಾಳೇನನ್ನು? ಶಿವರಾಮುನು ನೀರಿನಿಂದ ತುಂಬಿದ್ದ ದೊಡ್ಡ ತಾಮ್ರದ ಪಾತ್ರೆಯಲ್ಲಿ ಕೈಕಾಲುಗಳನ್ನು ಹೊರಸೀಡಿ ಕುಳಿತು ಬೊಬ್ಬಿಡುತ್ತಿದ್ದಾನೆ. ಕೋಣೆಯೆಲ್ಲೆಲ್ಲಾ ನೀರು. ಅವನಿಗೆ ಅದರಿಂದೆದ್ದುಕೊಳ್ಳಲಾಗುತ್ತಿದ್ದಿಲ್ಲ.

ಸುಂದರಿಯು ಅವನನ್ನೆಬ್ಬಿಸಿದಳು. “ಶಿವರಾಮು? ಏಕೋ ಎದ್ದದ್ದು? ಎಲ್ಲಿಗೆ ಹೋಗುತ್ತಿದ್ದೀ?”

“ಅಮ್ಮ ಗಾಡಿ” ಎಂದು ಕೂಗಿದ.

ಶಿವರಾಮುನನ್ನು ಪಾತ್ರೆಯಿಂದೆತ್ತಿ ನಿಲ್ಲಿಸಿ, ನೆಲದಲ್ಲಿದ್ದ ನೀರನ್ನು ಜಾಡಿಸಿ ಸುಂದರಿಯು ಮಗುವಿನ ಸಮೇತ ಪುನಃ ನಿದ್ರಿಸಿದಳು.

ದೊಡ್ಡ ಭೂತ! ಕಪ್ಪಗಿನ ಮುಸುಕುಹಾಕಿಕೊಂಡಿದೆ. ಕೊಂಬುಗಳಿವೆ—ಗುಡಾಣದಂತಹ ಬಾಯಿ. ಸುಂದರಿಯು ಶಿವರಾಮುನನ್ನು ಕೈಯಲ್ಲೆತ್ತಿಕೊಂಡಿದ್ದಾಳೆ. ಭಯಭೀತಿಯಿಂದ ದಿಗಿಲುಗೊಂಡಿದ್ದಾಳೆ. ರಾಕ್ಷಸನು ಹಲ್ಲು ಕಡಿಯುತ್ತಾ ಅವಳ ಸೀರೆಯನ್ನೆಳೆಯುತ್ತಿದ್ದಾನೆ. “ಮಗುವನ್ನು ಕೊಡಲೊಲ್ಲೆ! ಸಾಯುವೆನು!” ಎಂದು ಸುಂದರಿಯು ಓಡುತ್ತಿದ್ದಾಳೆ—ಅರ್ಭಟಿಸುತ್ತಿದ್ದಾಳೆ.

ರಘುನಾಥನು ತಟ್ಟನೆ ಎಚ್ಚತ್ತ. ಹೌಹಾರಿ,

“ಸುಂದ! ಸುಂದರಿ!!”

“ಆಂ ಆಂ”

“ಕೂಗುತ್ತಿದ್ದಿಯೇಕೆ?”

“ಆಂ—ಆಂ”

“ಸುಂದರಿ ಕೂಗುತ್ತಿದ್ದಿ ಏಕೆ—ಯೇ!”

ಸುಂದರಿಯು ಕಣ್ಬಿಟ್ಟಳು.

“ಏನು?”

“ಕೂಗುವೆಯೇಕೆ?”

“ಕೂಗಿದ್ದೆನೇ? ಇಲ್ಲ. ಏನೋ ಕನಸು ಕಂಡೆ.”

ಮರುದಿನ ಪೂರ್ವಾಹ್ನ ರಘುನಾಥರಾಯನು ಆಫೀಸಿಗೆ ಹೊರಡಲು ಸಿದ್ಧನಾಗುತ್ತಿದ್ದನು: ಹೊಂಡವನ್ನು ಮುಚ್ಚಿಸುತ್ತೇನೆಂದು ಪತ್ನಿಗಿತ್ತ ಭಾಷೆಯ ನೆನಹು ಅವನಿಗಿರಲಿಲ್ಲ. ಸುಂದರಿಗೂ ಅದರ ನೆನಪಾಗಲಿಲ್ಲ. ಶಿವರಾಮುನು ಮಾತ್ರ ಗಾಡಿಯನ್ನು ಮರೆಯದೆ ಅದಕ್ಕಾಗಿ ತಂದೆಯನ್ನು ಕಾಡುತ್ತಿದ್ದ. ರಘುನಾಥನು ಏನನ್ನೋ ಆಲೋಚಿಸುತ್ತಾ ಪಂಚೆಯನ್ನುಡುತ್ತಿದ್ದ. ಶಿವರಾಮುನು ತಂದೆಯ ಸುತ್ತುಸುತ್ತು ಓಡಾಡಿ “ಗಾಡಿ! ಗಾಡಿ! ಗಾಡಿ! ಎನ್ನುತ್ತಿದ್ದ! ಅವನೊಡನೆ ಕರಿಬೆಕ್ಕು ರಘುನಾಥನ ಕಾಲೆಡೆಯಲ್ಲಿ ನುಗ್ಗಿ ಅದಿ ಪಂಚೆಯನ್ನೆಳೆಯುತ್ತಿತ್ತು. “ಮನೆಯಿಂದ ಹೊರಗೆ ಕಾಲಿಡಬೇಡಿ” ಎನ್ನುತ್ತದೆಯೋ ಎಂಬಂತೆ ಅಡ್ಡಗಟ್ಟುತ್ತಿತ್ತು.

[೧೩ನೇ ಪುಟಕ್ಕೆ ಮುಂದುವರಿಸಿಯದೆ.]

ತಗಣೆರಾಯನು ಹೇನುರಾಯನಿಗೆ ಬರೆದ ಪತ್ರ.

ಲೇಖಕ:—ಶ್ರೀ. ಅ. ರಾ. ಚಂದ್ರ.

ಮುಂಬಾಯಿ, ೮—೯—೧೯೩೨.

ಪ್ರಿಯ ಸ್ನೇಹಿತನಾದ ಹೇನುರಾಯನಿಗೆ, ನಿನ್ನ ಪ್ರೀತಿಗೆ ಪಾತ್ರನಾದ ತಗಣೆರಾಯನು ಮಾಡುವ ನಮಸ್ಕಾರಂಗಳು.
ಕುಶಲೋಪರಿ ಸಾಂಪ್ರತ–

ಪ್ರಿಯನೇ–ಅತಿಶಯವಾದ ಸುಖಾಭಿಲಾಷೆಯಿಂದ ಊರನ್ನು ಬಿಟ್ಟು ನಿಮ್ಮಂತಹ ಸ್ನೇಹಿತರೆಲ್ಲರನ್ನೂ ತ್ಯಜಿಸಿ ಮುಂಬಾಯಿಯಂತಹ ಸುಂದರ ನಗರಕ್ಕೆ ಬಂದೆನು. ನಿಜ! ಸ್ವಲ್ಪ ಕಾಲದ ವರೆಗೆ ನನ್ನ ಆಶೆಯೇನೋ ಈಡೇರಿತು. ಆದರೀಗ, ಕಾಲಚಕ್ರವು ತಿರುಗಿದಂತೆ ತೋರುವುದು. ಇಂದು ಸುಖ ಸಿಗಬಹುದು; ನಾಳೆ ಸುಖ ಬರಬಹುದೆಂಬಭಿಲಾಷೆಯಿಂದ ಕಳೆದ ಒಂದೆರಡು ವರುಷಗಳನ್ನು ಅನ್ನಾಹಾರವಿಲ್ಲದೆ ಹೇಗೂ ಕಳೆದೆನು. ಆದರೆ ಇನ್ನು ಮುಂದಕ್ಕೆ ಬಹಳ ಕಷ್ಟದ ದಿನಗಳು ಸನ್ನಿಹಿತವಾಗುವಂತೆ ಭಾಸವಾಗುತ್ತದೆ. ದೇವಾದಿ ದೇವತೆಗಳೆಲ್ಲರೂ ನನ್ನ ಮೇಲೆ ಮುನಿದಂತೆ ತೋರುವುದು. ಏನು ಮಾಡಲಿ? ಎಲ್ಲಿಗೆ ಹೋಗಲಿ? ಯಾರ ಮರೆಹೊಕ್ಕಲಿ? ದಿಕ್ಕೇ ತೋಚದು. ನನ್ನ ಅದೃಷ್ಟ!!!

ತಮ್ಮಾ, ನಿನಗೆ ಗೊತ್ತಿದೆಯೇ ಮುಂಬಾಯಿಯಂತಹ ನಗರಗಳಲ್ಲಿ ಈಗೀಗ ನನ್ನಂತಹವರಿಗೆ ಎಡೆಯೇ ಇಲ್ಲ ಎಂದು? ನನ್ನ ವಸತಿಯನ್ನು ಗಣಿಸುವವರೇ ಇಲ್ಲ. ಈಗ ನಾಲ್ಕೆಡೆಗಳಲ್ಲಿ ನೋಡಿದರೂ ಬಿಳೀ ಉಡುಪುಗಳು! ಬಿಳೀ ಟೋಪಿಗಳು! ಅದರಲ್ಲಿಯೂ ಒಂದು ಶರ್ಟು, ಒಂದು ದೋತಿ, ಇಲ್ಲವೇ ಪೈಜಾಮು! ಬರೇ ಗಾಳಿಯೊಡನೆ ಹಾರಿ ಬರುವ, ಧೂಳು ಮೈಗೆ ತಗಲಿದರೆ ಮೈಸಿಪ್ಪೆಯೇಳುವ, ಕೋಮಲಾಂಗಿಯರಿಗೂ ಆ ಬಿಳೀ ಮತ್ತು ದೊರಗು ಖಾದೀ ಬಟ್ಟೆಯ ಮೇಲೆ ಪ್ರೀತಿ. ಮಲಗುವ ಹಾಸಿಗೆಯಾದರೋ ಅದೂ ಕೂಡಾ ಖಾದಿ! ಈ ಉಡಿಗೆತೊಡಿಗೆಗಳಲ್ಲಿ ನನ್ನ ಬೀಡನ್ನೆಲ್ಲಿ ಸ್ಥಾಪಿಸಲಿ? ಸ್ಥಳವೇ ಇಲ್ಲ. ಬಿಳೀ ಬಟ್ಟೆಯೆಂದರೆ ನನ್ನ ಪಾಲಿಗದು ಬೇಟೆಗಾರರ ಬಲೆಯಂತೆ. ಹಿಂದೆಯಾದರೋ ತಾಯಿಯ ಮನೆಯಿಂದ ಅತ್ತೆ ಮನೆಗೆ, ಅತ್ತೆಯ ಮನೆಯಿಂದ ಅಜ್ಜಿ ಮನೆಗೆ, ಅಲ್ಲಿಂದ ಸ್ನೇಹಿತನ ಮನೆಗೆ ಹೀಗೆಂದು ಕೋಟಿನಿಂದ ಶರ್ಟಿಗೆ, ಶರ್ಟಿನಿಂದ ವೈಸ್ಟ್‌ಕೋಟಿಗೆ ಸುತ್ತಾಡುತ್ತಿದ್ದೆ; ಎಲ್ಲಿಯೂ ಅಲ್ಲದಿದ್ದರೆ ಟೈ ಕೊಲರುಗಳ ಎಡೆಯಲ್ಲಾದರೂ ಉಳುಕೊಳ್ಳುತ್ತಿದ್ದೆ. ಈಗ ಅದೆಲ್ಲಾ ಶೂನ್ಯ! ಅಲ್ಲಿ ಇಲ್ಲಿ ಹಲಕೆಲ ಭೂತದಯಾಪರರು ನನ್ನ ಬೀಡಿಗೆ ಯೋಗ್ಯವಾದ ಉಡುಪನ್ನು ಉಡುವರು. ಅದು ಕೂಡಾ ಭೀತಿಯಿಂದ! ಕೆಲವು ನಿಯಮಿತ ಸಮಯದಲ್ಲಿ ಮಾತ್ರ ಬಿಳೀ ಬಟ್ಟೆಯನ್ನುಡುವರು. ಖಾದಿ ಬಟ್ಟೆಯು ನನ್ನ ಪ್ರಾಣಾಪಹರಣವನ್ನು ಮಾಡುತ್ತಿದೆ. ಇನ್ನು ಯಾರ ಪ್ರಾಣವನ್ನು ತಿನ್ನಲಿದೆಯೋ–ದೇವರೇ ಬಲ್ಲ.

ಮಿತ್ರಾ–ನನ್ನ ಮೊರೆಯನ್ನು ಕೇಳುವವರಾರು? ಆ ಬಿಳೀ ಬಟ್ಟೆಯ ಪ್ರಭಾವವು ದಿನೇ ದಿನೇ ಹೆಚ್ಚುತ್ತಲಿರುವುದು. ಇದೆಲ್ಲವನ್ನೂ ನೆನಸಿಕೊಂಡರೆ ಹಿರಿಯರ ಮಾತು ಸ್ಮರಣೆಗೆ ಬರುತ್ತದೆ. ಶ್ರೀರಾಮಚಂದ್ರನು ನಮ್ಮವರ ದಾತಾರುಗಳಾದ ರಾವಣಾದಿಗಳನ್ನು ಸಂಹರಿಸಿ, ವಿಭೀಷಣನಿಗೆ ಪಟ್ಟಕಟ್ಟಿದ ನಂತರ ನಮ್ಮ ಸ್ಥಿತಿಯು ಹಾಗೆಯೇ ಆಗಿತ್ತಂತೆ. ಕೆಲವು ಮಿತ್ರರ ಮಾತಿನ ಮೇಲೆ ಜೈಲಿಗೆ ಹೋದೆನು. ಅಲ್ಲಿಯಾದರೂ ಸುಖವಿರಬಹುದೆಂದು ತಿಳಿದೆನು. ಅಲ್ಲಿ ಬಹು ಮಂದಿ ವಾಸಿಸುವರೇನೋ ಸರಿ; ಅಲ್ಲದೆ ಅಲ್ಲಿ ಉಳುಕೊಳ್ಳಲಿಕ್ಕೆ ತುಂಬಾ ಸ್ಥಳವಿದೆ ಖರೆ. ಆದರೆ, ಆ ಜೈಲಿನ ಕೈದಿಗಳ ಎದೆಯಲ್ಲಿಯೇ ರಕ್ತವಿಲ್ಲವೆಂದ ಮೇಲೆ ನನಗಾದರೂ ಎಲ್ಲಿಂದ ಸಿಗಬೇಕು? ಸಾಲದುದಕ್ಕೆ ಸತ್ಯಾಗ್ರಹವಂತೆ! ಅನ್ನ ನೀರು ಬಿಡುವುದಂತೆ! ಅಂತೂ ಇಂತೂ, ಎಲ್ಲಿಯೂ ನನಗೆ ಉಪವಾಸ! ಹೆಚ್ಚು ಕಡಿಮೆ ಹಿಂದೂಸ್ಥಾನದ ಎಲ್ಲಾ ನಗರಗಳನ್ನು ಸಂಚರಿಸಿ ನೋಡಿದೆನು. ಎಲ್ಲಿ ನೋಡಿದರೂ ಅಲ್ಲಿ ಬಿಳೀ ಬಟ್ಟೆಗಳು. ಎಲ್ಲಿ ಕೇಳಿದರೂ ದೇಶೀ ಸ್ವದೇಶೀಯ ಮಾತು! ಸಾಲದುದಕ್ಕೆ ಅಲ್ಲಲ್ಲಿ ಪ್ರಚಾರಕರು! ಖಾದಿಯು ಆರೋಗ್ಯಕರವಾದುದಂತೆ! "ಇಕೋನಮಿ"ಯಂತೆ! ಇಂದಿನ "ಫೇಷನ"ಂತೆ! ದೇಶದೇಳಿಗೆಗೆ ಒಂದು ಸಾಧನವಂತೆ! ಬಡವರ ಏಳ್ಗೆಯಂತೆ! ಖಾದಿಯುಡುವುದರಿಂದ ಹಿಂದೂಸ್ಥಾನದ ಐಶ್ವರ್ಯವು ಹಿಂದೂಸ್ಥಾನದಲ್ಲೇ ಉಳಿಯುವುದಂತೆ! ಹೀಗೆಂದು ಒಂದೇ ಭರದಿಂದ ಮಾರ್ಪಾಟವನ್ನು ಹೊಂದುತ್ತಲಿರುವ ಹಿಂದೂಸ್ಥಾನದಲ್ಲಿ ನನಗೆ ಸ್ಥಾನವಿಲ್ಲ! ಇಲ್ಲಿ ಬಿದ್ದು ಉಪವಾಸ ಸಾಯುವುದಕ್ಕಿಂತ ಪರದೇಶಕ್ಕಾದರೂ ಹೋಗಬೇಕೆಂದಿರುವೆನು. ಆದುದರಿಂದ ಮಿತ್ರಾ, ನನ್ನ ಈ ಆಶೆಯು ಈಡೇರಿದರೆ, ಇದೇ ನನ್ನ ಕೊನೆಯ ಕಾಗದ. ನಮ್ಮ ಹಿಂದಿನ ಮಿತ್ರರೆಲ್ಲರಿಗೂ ಧನ್ಯವಾದಗಳನ್ನು ಹೇಳಿಬಿಡು!


ಇಂತಿ ಮಾಡುವ ನಮಸ್ಕಾರ,

ತಗಣೆರಾಯ.

'Luck' says the fool; "hard work" says the wise man.

ಉದರವಿರುತ್ತಿದ್ದಿಲ್ಲವಾದರೆ..........?

(ಲೇಖಕರು:—ಶ್ರೀ. ಬಿ. ನರ್ಸಪ್ಪ.)



ಮುಸ್ಸಂಜೆಯ ಸಮಯ—ದಿನಕರನ ದಿನವೊಂದರ ಅಂತಿಮಕಾಲ—ಶ್ರೀಮಂತರ ಮನಮೆಚ್ಚಿಸುವುದಕ್ಕಾಗಿ ಮಂದಮಾರುತನು ಅವರ ವಿಹಾರಸ್ಥಾನಗಳಾದ ಉದ್ಯಾನ, ಮೈದಾನ, ಹೊಳೆ ಕಿನಾರೆಗಳೆಡೆಗೆ ಭರದಿಂದೋಡುವ ವೇಳೆ—ಸಿರಿವಂತರ ಎಳೆ ಪಸುಳೆಗಳು—"ಬೇಬಿ"ಗಳು-ಚಿಕ್ಕ ಚಿಕ್ಕ ಕೈಗಾಡಿಗಳಲ್ಲಿ ಕುಳಿತು, ಸೇವಕಜನರೊಡಗೂಡಿ ಗಾಳಿ ಸೇವಿಸುವ ಹೊತ್ತು.

ಬೋಳೂರಿನ ಹಲವು ಮುಳಿಮಾಡಿನ ಮನೆಗಳೆಡೆಯಲ್ಲೊಂದು ಚಿಕ್ಕ ಗುಡಿಸಲು. ಮುರುಕಲು ಹಟ್ಟಿಯೆಂದರೂ ಒಪ್ಪುವುದು. ಒಂದೇ ಕೋಣೆ! ಬಾಗಿಲು ನಾಲ್ಕಡಿ ಎತ್ತರವಿರಬಹುದು. ಅದನ್ನು ಮುಚ್ಚಿ ಹೊರಗಿನಿಂದ ಸಂಕೋಲೆ ಬಿಗಿಯಲ್ಪಟ್ಟಿತ್ತು.

ಆ ಕೋಣೆಯೊಳಗೆ ಸಣ್ಣ ಹಸುಗೂಸೊಂದು ಅಳುತ್ತಿದೆ. ಅರಚುತ್ತಿದೆ. ಹೃದಯಭೇದಕ ಆರ್ತನಾದ—ಕ್ಷೀಣ ಸ್ವರ. ಅತ್ತು ಅತ್ತು ಸ್ವರವು ಕುಗ್ಗಿದಂತೆ ತೋರುತ್ತಿತ್ತು. ಮಗುವಿನ ಕರುಣಾಜನಕ ಕೂಗು ಮಾಡಿನ ಹುಲ್ಲನ್ನು ಕೂಡಾ ಸುಡುವುದೋ ಎಂಬಂತಿತ್ತು.

ಬಾಬು—ಬಹಳ ಬಡವ; ಬಡಕಲು ದೇಹಿಯಾದುದರಿಂದ ಅವನನ್ನು "ಕ್ಷೀಣೇಶ"ನೆಂದು ಕರೆಯುವ ವಾಡಿಕೆ. ಉಪವಾಸವ್ರತದಲ್ಲಿ ತುಂಬಾ ಅನುಭವಿಕ! ಒಂದು ದಿನ ಒಂದು ಗಂಜಿ ಕುಡಿದರೆ, ಮತ್ತೊಂದು ದಿನ ನೀರು ಕುಡಿದು ದಿನಹರಣೆ ಮಾಡುತ್ತಿದ್ದವನು. ಸಂಸಾರಬೇಕಷ್ಟೆ! ಅವನ ಸತಿ ಶೀತು ಮತ್ತು ಮೊಲೆಯುಣ್ಣುವ ಪಸುಳೆ—ಇವರು ಅವನ ಸಂಸಾರ—ಐಸಿರಿ.

ಬೇಸಿಗೆಯ ಬಿಸಿಲು—ಬಡವರ ನಾಶವನ್ನು ಬಯಸುತ್ತಿರುವನೋ ಎಂಬಂತೆ, ಸೂರ್ಯದೇವನು ಪ್ರಚಂಡನಾಗಿ ಪ್ರಜ್ವಲಿಸುತ್ತಿದ್ದಾನೆ.

ಲಸ್ಕರೀ ಕಾರ್ಖಾನೆಯ ಚಿಮಿಣಿ ಸ್ಥಂಭದ ಕೆಲಸದಲ್ಲಿ ಕ್ಷೀಣೇಶನು ನಿರತನಾಗಿದ್ದಾನೆ. ಸುತ್ತುಮುತ್ತಲಿನ ಪ್ರದೇಶವು ಅವನಿಗೆ ತೋರುತ್ತಿದೆ. ಐಶ್ವರ್ಯವಂತರ ಕಾರುಗಳು ಭಾಂ! ಭಾಂ! ಎನ್ನುತ್ತಾ ಓಡುತ್ತಿರುವುದು ಕಾಣುತ್ತಿದೆ. ಅಂಗಡಿಗಳಲ್ಲಿ ವ್ಯಾಪಾರ ಸಾಪಾರ ನಡೆಯುತ್ತಿರುವುದು ತೋರುತ್ತಿದೆ—ಕಾಣುತ್ತಿದೆ—ಕಂಡಂತೆ, ನೋಡಿದಂತೆ, ಕ್ಷೀಣೇಶನ ತಲೆಯು ಗರ್‍ರನೆ ತಿರುಗಿದಂತಾಯಿತು. ತಾನೀಗೆಲ್ಲಿರುವೆನೆಂದು ಕೂಡಾ ಅವನಿಗೆ ತಿಳಿಯದಾಯಿತು! ಮೊದಲೇ ನಿಶ್ಶಕ್ತಿ; ಅದರಲ್ಲೂ ಎರಡು ದಿನಗಳ ಉಪವಾಸ. ಬರೇ ನೀರ ಶಕ್ತಿಯಿಂದೆಷ್ಟು ಜೀವಿಸಬಹುದು? ಸೂರ್ಯತಾಪವು ಅವನ ಪಿತ್ಥವನ್ನು ಸಿಳ್ಳನೆ ಸೀಳಿತು! ಕ್ಷಣಮಾತ್ರದಲ್ಲಿ ಕ್ಷೀಣೇಶನು ಕೆಳಗೆ—ಭೂಮಿಯ ಮೇಲೆ ಬಿದ್ದುಬಿಟ್ಟನು.

ಆಸ್ಪತ್ರೆಯ ಮಂಚದ ಮೇಲೆ ಕ್ಷೀಣೇಶನು ಮಲಗಿ ಪರಮಾತ್ಮನ ಪಾದಾರವಿಂದದಲ್ಲಿ ತನ್ನ ಆತ್ಮವನ್ನು ಸಮರ್ಪಿಸುತ್ತಿದ್ದಾನೆ. ಅವನ ಕಣ್ಣುಗಳು ಹಳದಿ ಕೆಂಪು ಮಿಶ್ರಿತವಾಗಿವೆ—ಮೇಲೆಳೆದುಕೊಂಡಿವೆ. ಝುರ್ಝುರಿತವಾದ ಹಣೆಯು ವಸ್ತ್ರದಿಂದ ಸುತ್ತಲ್ಪಟ್ಟಿದೆ. ನುಚ್ಚುನೂರಾದ ಕೈಕಾಲುಗಳು ತಣ್ಣಗಾಗುತ್ತಿವೆ. ಘಾಯಗಳಿಂದ ರಕ್ತವು ಸೋರುವುದು ನಿಂತಿದೆ. ರಕ್ತವಿದ್ದರಲ್ಲವೇ ಸೋರುವುದು? ಇನ್ನೊಂದರೆಕ್ಷಣ! ಅಷ್ಟೆ ಉಳಿದಾಯು! ಶೀತುವು ಗಂಡನ ಪಾದಗಳ ಮೇಲೆ ಬಿದ್ದು ಹೊರಳುತ್ತಿದ್ದಾಳೆ. ಅವಳ ದುಃಖವನ್ನು ಬಣ್ಣಿಸುವುದೆಂತೂ ಬೇಡ.

ಇಷ್ಟರ ತನಕ ಶೀತುವು ನಿರ್ಧನಿಕಳಿದ್ದಳು ಅಷ್ಟೆ! ಈಗಲಾದರೋ ನಿರ್ಗತಿಕಳು—ವಿಧವೆಯೂ ಆಗಿರುವಳು. ಯಾರು ಬದುಕಿದರೇನು? ಸತ್ತರೇನು? ಹೊಟ್ಟೆಯ ಹೊಡೆತವು ನಿಲ್ಲುವುದೇ? ಅದರ ಹಾಡು ಪಾಡು ಒಂದೇ!

× × × × ×

ಶೀತುವು ಐಶ್ವರ್ಯವಂತರ ಮನೆಯೊಂದರಲ್ಲಿ ಸೇವಕಿಯಾಗಿದ್ದಾಳೆ. ಪ್ರಾತಃಕಾಲ ೫ ಗಂಟೆಗೆ ಪ್ರಾರಂಭವಾದರೆ ರಾತ್ರಿ ೧೦ ಘಂಟೆಯ ತನಕವೂ ಕೆಲಸ! ಊಟ ವಸ್ತ್ರವಿಲ್ಲದೆ ಅವಳಿಗೆ ಸಿಗುವ ಪಗಾರವೆಂದರೆ ೫ ರೂಪಾಯಿಗಳು.

ಮೊಲೆಯುಣ್ಣುವ ಮಗುವನ್ನು ಕೆಲಸಮಾಡುವಲ್ಲಿಗೊಯ್ದರೆ ಯಜಮಾನರೇನೆಂಬುವರೋ ಎಂಬ ಶಂಕೆ ಶೀತುಗೆ. ಅದಕ್ಕಾಗಿ ಕೆಲವು ದಿನಗಳ ತನಕ ಮಗುವನ್ನು ಕೋಣೆಯೊಳಗೆ ಹಾಕಿ ಬಾಗಿಲನ್ನೆಳೆದು, ಸಂಕೋಲೆ ಹಾಕಿ ಕೆಲಸಕ್ಕೆ ಹೋಗುತ್ತಿದ್ದಳು—ಉದರದ ಮೊರೆತಕ್ಕಾಗಿ—ಲೇಖನದ ಪ್ರಾರಂಭದಲ್ಲಿ ಉಲ್ಲೇಖಿಸಿದುದು ಅವಳ ಗುಡಿಸಲಿನ ವರ್ಣನೆ! ಅವಳ ಮುದ್ದು ಕೂಸಿನ ಆರ್ತನಾದ!

ಮಗುವು ದಿನೇ ದಿನೇ ಸೊರಗಿಕೊಳ್ಳುತ್ತಿರುವುದನ್ನು ಕಂಡು ಶೀತುಗೆ ತಡೆಯಲಾರದಾಯಿತು. ಒಂದು ದಿನ ಕೆಲಸಮಾಡುವಲ್ಲಿಗೆ ಅದನ್ನು ಕೊಂಡೊಯ್ದಳು. ಬಚ್ಚಲುಕೊಟ್ಟಿಗೆಯ ಮೂಲೆಯೊಂದರಲ್ಲಿ ಮಲಗಿದ್ದ ನಾಯಿಯನ್ನು ಓಡಿಸಿ, ಹರಕು ಮುರುಕು ಬಟ್ಟೆಗಳನ್ನು ಅಲ್ಲಿ ಹಾಸಿ ಮಗುವನ್ನು ಮಲಗಿಸಿದಳು—ಚುಂಬಿಸಿ ಕೆಲಸಕ್ಕಾರಂಭಿಸಿದಳು.

ಪಾರ್ವತಮ್ಮ—ಮನೆಯ ಯಜಮಾನಿ! (ಯಜಮಾನನೆಂದರೂ ತಪ್ಪಿಲ್ಲ) ಸುಮಾರು ಸೇರು ಭಾರವಿದ್ದರು. ಮುಂದೆಯೂ ಹಿಂದೆಯೂ ಮಾಂಸವಿಳಿದಿತ್ತು. ಮಾಂಸವಿಳಿದಿದ್ದಷ್ಟೇ ಅವರಲ್ಲಿ ಕಾಠಿಣ್ಯವೂ ಬೆಳೆದಿತ್ತು. ಐಶ್ವರ್ಯಮದವು ತನ್ನ ಪರಮಾವಧಿಯನ್ನು ಕಂಡುಕೊಂಡದ್ದೆಂದರೆ ಇವರಲ್ಲೇ!

ಶೀತುವು ಮಗುವನ್ನು ಬಚ್ಚಲುಕೊಟ್ಟಿಗೆಯಲ್ಲಿ ಮಲಗಿಸಿದ್ದುದನ್ನು ಪಾರ್ವತಮ್ಮನು ಕಂಡಿರಲಿಲ್ಲ. ಯಾವುದೋ ಕೂಸುವು ಬೊಬ್ಬಿಡುವ ಸ್ವರವು ಅವರ ದೊಡ್ಡ ಕಿವಿಗಳಿಗೆ ಬಿತ್ತು. ಬಡವರ ಮಕ್ಕಳ ಅಳುವ ಸ್ವರವು ಶ್ರೀಮಂತ ಹೆಂಗುಸರ ಕಿವಿಗಳಿಗೆ ಕೇಳಿಸಿದರೆ ಅವರಿಗೇಕೋ ಒಂದು ತರದ ಪ್ರಾಣಸಂಕಟ! ಬಹುಶಃ ಪಾರ್ವತಮ್ಮನವರಿಗೂ ಹಾಗೆಯೇ ಆಗಿರಬೇಕು! ಬಚ್ಚಲುಕೊಟ್ಟಿಗೆಯ ಬಳಿಗೆ ಬಂದರು. ನೋಡುತ್ತಾರೇನನ್ನು? ಶೀತುವು ಮಗುವಿನ ಮಲವನ್ನು ಬೇಗ ಬೇಗನೆ ಚಿಂದಿಗಳಿಂದ ಒರಸುತ್ತಿದ್ದಾಳೆ! ಪಾರ್ವತಮ್ಮನವರಿಗೆ ರೇಗಿತು! ಬಕ್ಕವೆಂದರು—"ಎಲೇ! ರಂಡೆ! ಇದು ನಿನ್ನ ಮಿಂಡನ ಮನೆಯೊ? ಕೆಲಸಮಾಡುವಲ್ಲಿಗೂ ನಿನ್ನ ಈ ಶನಿಯನ್ನು ತಂದು ಮನೆಯನ್ನೆಲ್ಲ ಹೇಸಿಗೆಗೊಳಿಸಿದಿಯಲ್ಲಾ? ಈ ಪಿಂಡವನ್ನು ಎಲ್ಲಿಗಾದರೂ ಹಾಳು ಬಾವಿಗೆಸೆದರೇನಾಗುತ್ತಿತ್ತು? ಹೌದೆ! ಏ ಲಜ್ಜೆಗೇಡಿ! ಮಗುವನ್ನು ಮನೆಯಲ್ಲಿ ಬಿಡುತ್ತೇನೆಂದು ಹೇಳಿದ್ದೀಯಲ್ಲಾ? ಈಗೇನು ಮಾಡಿದೆ? ಏ ಬೋಳೀ! ಈ ಮಾರಿಯನ್ನು ಮನೆಯಲ್ಲಿ ಬಿಟ್ಟುಬರುತ್ತಿದ್ದರೇನು ಸಾಯುತ್ತಿತ್ತೋ? ಸತ್ತರೂ ಏನಾಗುತ್ತಿತ್ತು? ನೀನಿನ್ನೂ ಜವ್ವನೆಯಿರುವಿಯಲ್ಲಾ? ಇನ್ನೆಷ್ಟೋ . . . ."

ಶೀತುಗೆ ಸಾಕಾಯಿತು. ಅಷ್ಟರ ತನಕವೂ ಸುಮ್ಮಗಿದ್ದವಳು ದೈನ್ಯದೃಷ್ಟಿಯಿಂದೊಮ್ಮೆ ಪಾರ್ವತಮ್ಮನವರನ್ನು ನೋಡಿ, ಮೆಲ್ಲನೆ ಮೃದುವಾಗೆಂದಳು: "ಅಲ್ಲಮ್ಮಾ! ಮಗುವಿಗೆ ಹಸಿವಾಗಿರಬೇಕು. ಸ್ವಲ್ಪ ಕೂಗಿತು; ಮೊಲೆ ಕೊಟ್ಟೆ; ಮಲಮಾಡಿತು; ತೆಗೆದೆ; ಅಷ್ಟೇ! ಇನ್ನು ಇದನ್ನು ಇಲ್ಲಿಗೆ ಕರತರುವುದಿಲ್ಲ—"

ಮದೋನ್ಮತ್ತರ ಎದೆಯಲ್ಲಿದ್ದ ಕಲ್ಲಹೃದಯವು ಬಡವರ ದೈನ್ಯದೃಷ್ಟಿಯಿಂದ ಕರಗುವುದುಂಟೇ? ಹಸಿವಿನ ಅಳತೆ! ಉದರದ ಮೊರತೆ! ಪಾಪ! ಪಾರ್ವತಮ್ಮನವರೇನು ಬಲ್ಲರು? ಅವರು ಐಶ್ವರ್ಯವಂತರಿಗೆ ತಕ್ಕುದಾದಂತೆ ಹೀಗೆಂದರು—"ಥೂ ರಂಡೆ! ಮಕ್ಕಳುಮರಿಗಳನ್ನಿಲ್ಲಿಗೆ ನೀನು ತರುತ್ತೀ ಎಂಬುದು ಮೊದಲೇ ತಿಳಿದಿರುತ್ತಿದ್ದರೆ ನಿನ್ನನ್ನಿಲ್ಲಿಗೆ ಕಾಲಿಡಬಿಡುತ್ತಿದ್ದಿಲ್ಲ. ಇನ್ನು ನೀನಿಲ್ಲಿರಬೇಡ! ಈಗಲೇ ಹೊರಡು!

(೧೧ನೇ ಪುಟಕ್ಕೆ ಮುಂದರಿಸಿಯದೆ.)

ರಾಮ್ಸೇ ಮೆಕ್‌ಡೊನಾಲ್ಡ್

(ಲೇ:—ಶ್ರೀ॥ ಮ. ಜಾ.)



ಲ್ಲರೂ 'ಮನುಷ್ಯರೇ!' ಒಬ್ಬನಿಗೆ ಹೇಗೆ ಕಣ್ಣು, ಕೈ, ಕಾಲುಗಳಿವೆಯೋ, ಹಾಗೆ ಇನ್ನೊಬ್ಬನಿಗೂ ಅವುಗಳಿವೆ. ಒಬ್ಬನು ದುಡಿಯುವಂತೆ ಇನ್ನೊಬ್ಬನೂ ದುಡಿಯುತ್ತಾನೆ. ಒಬ್ಬನಿಗೆ ಜೀವನದಲ್ಲಿ ಹೇಗೆ ಉತ್ಸಾಹವಿದೆಯೋ, ಆಶೆಯಿದೆಯೋ, ಹಾಗೆ ಇನ್ನೊಬ್ಬನಿಗೂ ಇದೆ. ಎಂದಾಗ ಮಾನವವರ್ಗದವರಲ್ಲಿ ಕಂಡುಬರುವ ವ್ಯತ್ಯಾಸಗಳಿಗೆ ಕಾರಣವಾದರೂ ಏನು? ಒಬ್ಬನು ಕೀಳುಸ್ಥಿತಿಯಲ್ಲಿರುವಾಗ ಅವನಂತಿರುವ ಇನ್ನೊಬ್ಬನು ಮೇಲುಸ್ಥಿತಿಗೆ ಏಕೆ ಏರಬೇಕು? ಒಬ್ಬನು ಬಡವನಿದ್ದು ಫಕ್ಕನೆ ಐಶ್ವರ್ಯವಂತನೂ, ಇನ್ನೊಬ್ಬನು ಐಶ್ವರ್ಯವಂತನಿದ್ದು ಫಕ್ಕನೆ ಬಡವನೂ ಏಕಾಗಬೇಕು? ಈ ಭೇದಾಭೇದಗಳಿಗೆ ಕಾರಣವಾದರೂ ಏನು?

ಈ ಪ್ರಶ್ನೆಗೆ ಯುಕ್ತವಾದ ಉತ್ತರವನ್ನು ನಾವು ನಮ್ಮ ಪ್ರಧಾನಮಂತ್ರಿ (Prime Minister) ರಾಮ್ಸೆ ಮೆಕ್‌ಡೊನಾಲ್ಡನ ಜೀವನಚರಿತ್ರೆಯಿಂದೆತ್ತಿ ಕೊಡೋಣ.

ರಾಮ್ಸೆ ಮೆಕ್‌ಡೊನಾಲ್ಡನು ೧೮೬೬ರಲ್ಲಿ ಲೊಸಿಮೌತ್ ಎಂಬಲ್ಲಿ ಜನಿಸಿದನು. ಪಾಪ! ಹುಟ್ಟುವಾಗಲೇ ಅವನನ್ನು ಬಡತನದ ಕಾರ್ಮುಗಿಲು ಎಲ್ಲೆಲ್ಲೂ ಆವರಿಸಿಕೊಂಡಿತ್ತು. ತನ್ನಂತಹ ಮಕ್ಕಳು ಸುಖಸಂತೋಷಗಳಿಂದ ಹಾಡಿ, ಪಾಡಿ, ನೆಗೆದು, ನಲಿದು ಬೆಳೆಯುತ್ತಿರುವಾಗ, ಮೆಕ್‌ಡೊನಾಲ್ಡನು ನೋಡಿ ನೋಡಿ ದಣಿಯುತ್ತಿದ್ದನು. ಹೇಗೋ ತನ್ನ ಬಾಲ್ಯವನ್ನೂ ಅಲ್ಲದೆ ಕೌಮಾರ್ಯವನ್ನೂ ಅದೇ ಸ್ಥಿತಿಯಲ್ಲಿ ಕಳೆದನು. ತನ್ನ ೩೦ನೇ ವರ್ಷ ಪ್ರಾಯದಲ್ಲೂ ಮೆಕ್‌ಡೊನಾಲ್ಡನು ತನ್ನ ವಾಂಛಿತ ಆದರ್ಶನಗಳನ್ನು ಹೊಂದಲಾರದಾದನು. ಗುರಿಯೇನೋ ಬಹಳ ಎತ್ತರಕ್ಕಿದ್ದಿತ್ತು. ಆದರೆ ಆ ಗುರಿಯನ್ನು ಹೊಂದಲು ಬೇಕಾದ ಸಾಧನೋಪಸಾಧನೆಗಳು ಸಿಗಲಿಲ್ಲ.

ಅವನಿಗೆ ಜ್ಞಾನಸಂಪಾದನೆಯ ಹಂಬಲು ಬಹಳ. ಓದುವುದರಲ್ಲೂ ಬರಹದಲ್ಲೂ ಅವನಿಗೆ ಬಹು ಆಸಕ್ತಿ. ಜ್ಞಾನಪಥದ ಮೂಲಕವಾಗಿಯೇ ತಾನು ಗಣ್ಯವ್ಯಕ್ತಿಯಾಗಬೇಕೆಂದು ಅವನ ಆಶೆ. ಸಿಕ್ಕಿಸಿಕ್ಕಿದ ಗ್ರಂಥಪಠನಗಳಾದುವು. ಬಡತನದ ನಿಜವಾದ ಪಾಠದ ಮೌಲ್ಯವೂ ತಿಳಿಯಿತು. ಮುಂದಕ್ಕೆ ಮೆಕ್‌ಡೊನಾಲ್ಡನು ತನ್ನೂರಲ್ಲಿ ನೆಲಸಲಾರದಾದನು.

ಹಳ್ಳಿಯ ಶಾಲೆಗಳಲ್ಲಿ ಬಡ ಉಪಾಧ್ಯಾಯನಾಗಿ ಒಂದೆರಡು ಪೌಂಡುಗಳನ್ನು ಗಳಿಸುವ ಹೀನವೃತ್ತಿಯು ಅವನಿಗೆ ಬೇಡವಾಯಿತು. ಹಳ್ಳಿ ಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ಬಲವಂತಪಡಿಸಿ ಊರಲ್ಲಿರ ಹೇಳಿದರೂ, ಮೆಕ್‌ಡೊನಾಲ್ಡನ ಭಾವೀ ಅದೃಷ್ಟವೊಂದು ಅವನನ್ನು (Loussiemouth) ಲೊಸಿಮೌತಿನಲ್ಲಿರಗೊಡಲಿಲ್ಲ—ಮೆಕ್‌ಡೊನಾಲ್ಡನು ನೆಟ್ಟನೆ ಇಂಗ್ಲೆಂಡಿಗೆ ನಡೆದುಬಿಟ್ಟನು. ತಂದೆತಾಯಿಗಳನ್ನೂ, ಕುಟುಂಬಗಳನ್ನೂ ಹಿಂದಕ್ಕಿರಿಸಿದನು.

ಲಂಡನ್ ನಗರದಲ್ಲಿ ಉದ್ಯೋಗ ಸಂಪಾದನೆಯ ಹಟದಿಂದಾಗಿಯೇ ಕೆಲವು ಸಮಯವು ದಾಟಿತು. ಕೈಯಲ್ಲಿದ್ದ ತುಂಡು ಪೈಯೊಂದೂ ವೆಚ್ಚವಾದ ಸಂದಿಗ್ಧ ಸಮಯದಲ್ಲಿ, ಮರುಳುಗಾಡಿನಲ್ಲಿ ಜಲಾಶಯವು ಸಿಗುವಂತೆ, ಮೆಕ್‌ಡೊನಾಲ್ಡನಿಗೆ ಒಬ್ಬ ಸಮಾಜ ಸುಧಾರಕನ ಪರಿಚಯವಾಯಿತು. ಆ ಮಹನೀಯನು ಮೆಕ್‌ಡೊನಾಲ್ಡನನ್ನು (Bristol) ಬ್ರಿಸ್ಟಲ್ ಪ್ರಾಂತ್ಯಕ್ಕೆ ಕರೆದುಕೊಂಡು ಹೋಗಿ, ಸಮಾಜ ಸುಧಾರಣಾಕಾರ್ಯದಲ್ಲಿ ಅನುಭವಿಕನನ್ನಾಗಿ ಮಾಡಿದನು. ಆದರೆ "ಏನಿದ್ದರೇನು? ಅದೃಷ್ಟದ ತ್ರಾಣಬೇಡವೆ?" ಅಲ್ಲಿಯೂ ಮೆಕ್‌ಡೊನಾಲ್ಡನು ಪ್ರತಿಭಾ ರಹಿತವಾದ ಕಾನನವನ್ನು ಹೊಕ್ಕಂತವನಾದನು. ಐಚ್ಛಿಕ ಶಿಖರಸೋಪಾನದಿಂದ ತಳ್ಳಿಹಾಕಲ್ಪಟ್ಟಂತವನಾದನು. ಸಾಮಾನ್ಯ ಜನರಿಗೇನೋ ಮೆಕ್‌ಡೊನಾಲ್ಡನ ಪರಿಚಯವಾಯಿತು.

ಒಮ್ಮೆ ರಾಮ್ಸೆ ಮೆಕ್‌ಡೊನಾಲ್ಡನು ಒಂದು ಉಪನ್ಯಾಸವಿತ್ತನು. ಸಭಾಕಂಪನಕ್ಕೆ ಹೆದರಿ ಬೆದರಿ, ತನ್ನ ಉಪನ್ಯಾಸವನ್ನು ಚೆನ್ನಾಗಿ ಕಂಠಪಾಠಮಾಡಿದ್ದನು. ಭಾಷಣವನ್ನು ಪ್ರಾರಂಭಿಸಿದನು! ಸಭೆಯಲ್ಲಿ ಸಭಿಕರ ಸಂಖ್ಯೆಯೆಷ್ಟು?—ಬರೇ ಮೂರು! ಮೆಕ್‌ಡೊನಾಲ್ಡನು ಇಲ್ಲಿಯೂ ಆಶಾನಿರಾಶನಾದನು—ನೆಟ್ಟಗೆ ತನ್ನ ಹಳ್ಳಿಗೆ ನಡೆದನು.

ಅವನಿಗೆ ಹಳ್ಳಿಯ ಜೀವನದಲ್ಲಿ ಸುಖವು ಕಂಡು ಬರಲಿಲ್ಲ. ತನ್ನಂತರ್ಯದಲ್ಲಿ ನಲಿದಾಡುತ್ತಿದ್ದ ಮಹದಭಿಲಾಷೆಗಳ ತರಂಗತರಂಗಗಳ ಸುಳಿದಾಟ ಬಡಿದಾಟದಿಂದಾಗಿ ಮೆಕ್‌ಡೊನಾಲ್ಡನು ನಿಮಿಷಮಾತ್ರವೂ ಮನೆಯಲ್ಲಿರದಾದನು. ಎಲ್ಲೆಲ್ಲೂ ತಿರುಗಿ ಉದ್ಯೋಗ ಸಂಪಾದನೆಗೆ ತೊಡಗಿದನು. ತನ್ಮಧ್ಯೆ ರಾಜಕೀಯ ರಂಗಕ್ಕೆ ಹೇಗಾದರೂ ಮಾಡಿ ಧುಮುಕಬೇಕೆಂದೂ ಬಗೆದನು.

ಕೊನೆಗೆ ಲಂಡನಿನ ಸಮೀಪದ ಒಂದು ಸಣ್ಣ ಪಟ್ಟಣದಲ್ಲಿದ್ದ Cyclist's Touring Club ಎಂಬ ವ್ಯಾಪಾರ ಸಂಸ್ಥೆಯಲ್ಲಿ ಲಕ್ಕೋಟೆಗಳ ಮೇಲೆ ವಿಳಾಸವನ್ನು ಬರೆಯುವ ಅಲ್ಪ ಉದ್ಯೋಗವು ಅವನಿಗೆ ದೊರೆಯಿತು—ಮಾಸಾಂತ್ಯದಲ್ಲಿ ಕೆಲವು ಶಿಲಿಂಗುಗಳ ಸಂಬಳವನ್ನು ಪಡೆದನು. ಅದರಲ್ಲೂ ಅವನಿಗೆ ಮನಃಶಾಂತಿಯುಂಟಾಗಲಿಲ್ಲ. ಅವನ ಅಭಿಲಾಷೆಯ ಕೊಡವು ದಿನೇದಿನೇ ಉಕ್ಕುತ್ತಾ ಹೋಯಿತು. ಈ ಮಧ್ಯೆ, ಅಲ್ಲೇ ಇನ್ನೊಂದು ಮಳಿಗೆಯಲ್ಲಿ 'ಇನ್‌ವೋಯಿಸ್ ಕ್ಲಾರ್ಕ್' ಕೆಲಸವು ಲಭಿಸಿತು. ಸಂಬಳವೆಷ್ಟು? ಹನ್ನೆರಡು ಶಿಲಿಂಗು ಆರು ಪೆನ್ಸ್!

ಈ ಅಲ್ಪ ಸಂಬಳದಲ್ಲಿ ಬಡ ಮೆಕ್‌ಡೊನಾಲ್ಡನು ಎಂತು ದಿನಹರಣೆಮಾಡುವನು? ಸಿಕ್ಕಿದ ಸಂಬಳವೆಲ್ಲ ತನ್ನ ಕೋಣೆಯ ಬಾಡಿಗೆಯಾಗಿ ಅನ್ಯರ ಕೈಸೇರುತ್ತಿತ್ತು. ಊಟದ ಬಗೆ ಹೇಗೆ? ತನ್ನ ವಯಸ್ಸಿನ ಇನ್ನಿತರ ತರುಣರು ನಾನಾ ವಿಧದ ಸುಖಸಾಗರದಲ್ಲಿ ಓಲಾಡಿ ಈಜಾಡುತ್ತಿದ್ದಾಗ, ಮೆಕ್‌ಡೊನಾಲ್ಡನ ಬಡ ಹೃದಯವಾದರೂ ಎಷ್ಟೊಂದು ದಗ್ಧವಾಗಬೇಕು?

ಮೆಕ್‌ಡೊನಾಲ್ಡನು ದಿನದ ಮೇಲೆ ದಿನವನ್ನು ಉಪವಾಸದಿಂದ ಕಳೆದನು. ತನ್ನ ಭೋಜನದ ವೇಳೆಯನ್ನು Guildhall Library ಎಂಬ ಪುಸ್ತಕಾಲಯದಲ್ಲಿ ಕಳೆದನು. ರಾತ್ರೆಯಲ್ಲಿ Birbeck Institute ಎಂಬ ರಾತ್ರಿಶಾಲೆಗೆ ಹೋಗಿ ಪತ್ರವ್ಯವಹಾರವೇ ಮೊದಲಾದ ಪಾಠಗಳಲ್ಲಿ ನಿಪುಣನಾದನು.

ಈ ಸಮಯದಲ್ಲಿ ಮೆಕ್‌ಡೊನಾಲ್ಡನಿಗೆ ಒಬ್ಬ ವೈಜ್ಞಾನಿಕನ ಪರಿಚಯವಾಯಿತು. ಆ ಪುಣ್ಯಾತ್ಮನು ತನ್ನ ಪ್ರಯೋಗಶಾಲೆ (Laboratory) ಯನ್ನು ಮೆಕ್‌ಡೊನಾಲ್ಡನ ವಶ ಕೊಟ್ಟನು. ಕಲ್ಲಿದ್ದಲಿನ ಶೋಧನೆಯಲ್ಲಿ ಮೆಕ್‌ಡೊನಾಲ್ಡನಿಗೆ ಆಸಕ್ತಿಯು ಹೆಚ್ಚಿತು. ಕ್ರಮೇಣ, ತಾನೊಬ್ಬ ರಸಾಯನೋಪಾಧ್ಯಾಯನಾಗಬೇಕೆಂಬ ಲವಲವಿಕೆಯಿಂದ ರಾತ್ರೆ ಹಗಲೆನ್ನದೆ ಆ ವಿದ್ಯೆಯಲ್ಲಿ ನಿರತನಾದನು. ವಿಹಾರ. ಆಟಕೂಟಗಳು ತ್ಯಜಿಸಲ್ಪಟ್ಟುವು. ದಿನದ ೨೪ ತಾಸುಗಳಲ್ಲಿ ೨೦ ತಾಸುಗಳನ್ನು ತನ್ನ ಪ್ರಯೋಗದ ಹಠಸಾಧನೆಯಲ್ಲೇ ಕಳೆದನು—South Kensington ಎಂಬಲ್ಲಿನ "ಕ್ವೀನ್" ವಿದ್ಯಾವೇತನವನ್ನು ಪಡೆಯಬೇಕೆಂದು ನಿರ್ಧರಿಸಿದನು. ಪರೀಕ್ಷಾ ದಿನವು ಸಮೀಪಿಸಿತು. ಆದರೆ, ಮೆಕ್‌ಡೊನಾಲ್ಡನು ಪರೀಕ್ಷಾ ಮಂದಿರದಲ್ಲಿದ್ದನೇ? ಇಲ್ಲ. ಆಸ್ಪತ್ರೆಯ ಮಂಚದ ಮೇಲೆ ಬಿದ್ದು ನರಳುತ್ತಿದ್ದನು.

ಈ ವಿಘಾತದಿಂದಾಗಿಯೂ ಮೆಕ್ಡೊನಾಲ್ಡನ ನಿಶ್ಚಲ ಹೃದಯವು ತನ್ನ ಉದ್ದಿಷ್ಟವನ್ನು ಮರೆಯಲಿಲ್ಲ. ಅವನ ಕಣ್ಣು ರಾಜಕೀಯಾಂಗಣಕ್ಕೆ ಹೋಯಿತು. ಪಾರ್ಲಿಮೆಂಟಿನ ಲೇಬರ್ (Labour) ಅಥವಾ ಸೊಸಿಯಾಲಿಸ್ಟ್ಸ (Socialists) ಪಂಗಡಗಳೊಡನೆ ಸೇರಬೇಕೆಂಬ ಆಶೆಯಾಯಿತು. ಪ್ರಥಮ ಸೋಪಾನವಾಗಿ ಅನೇಕ ಸಾರ್ವಜನಿಕ ಭಾಷಣಗಳನ್ನು ಕೊಟ್ಟು ಬಡತನದ ಶೌರ್ಯವನ್ನು ಪ್ರಕಾಶಿಸಿಬಿಟ್ಟನು. ಕ್ರಮೇಣ ಮೆಕ್‌ಡೊನಾಲ್ಡನನ್ನು ಜನರು ಗೌರವಿಸತೊಡಗಿದರು.

೧೮೯೫ರಲ್ಲಿ ಸೌತೇಂಪ್ಟನಿನ (Southampton) ಸುಧಾರಕಪಕ್ಷದ ಪ್ರತಿನಿಧಿಯಾಗಿ ಪಾರ್ಲಿಮೆಂಟಿನ ಇಲೆಕ್ಷನಿಗೆ ನಿಂತನು. ಅದರ ಫಲವೇನು? ಬರೀ ೬೬ ವೋಟುಗಳು ದೊರೆತು ಅಪಜಯಗೊಂಡನು! ಮತ್ತೂ ಒಂದೆರಡು ಸಲ ತನ್ನ ಅದೃಷ್ಟಪರೀಕ್ಷೆಯಾಯಿತು. ಸೋಲಿನ ಚಡಿಯೇ ಸಿಕ್ಕಿತು! ೧೯೦೬ರಲ್ಲಿ ಲೀಸೆಸ್ಟರ್ (Leicester) ಪ್ರಾಂತ್ಯದವರ ಕಡೆಯಿಂದ ಪಾರ್ಲಿಮೆಂಟಿನ ಚುನಾವಣೆಗೆ ನಿಂತನು. ಸರಿ!—ವಿಜಯಿಯಾದನು. ಮುಂದಕ್ಕೆ ಮೆಕ್‌ಡೊನಾಲ್ಡನನ್ನು ಬಹುವಚನದಿಂದ ಕರೆಯೋಣ.

ಮೆಕ್‌ಡೊನಾಲ್ಡರು ಪಾರ್ಲಿಮೆಂಟ್ ಸಭೆಯಲ್ಲಿ ಪ್ರಥಮದ್ದಾಗಿ ತನ್ನ ಸ್ವಾನುಭವದ ನಿರುದ್ಯೋಗ ಸಮಸ್ಯೆಯ ಕುರಿತು ಸ್ಫೂರ್ತಿಪೂರ್ವಕ ಮತ್ತು ಗಂಭೀರ ಭಾಷಣವನ್ನಿತ್ತರು— ಜನಮನವನ್ನಾಕರ್ಷಿಸಿದರು. ಅಂದಿನಿಂದ ಅವರ ಜೀವನದಲ್ಲಿ ನವಚೇತನವುಂಟಾಯಿತು.


೩೦ನೇ ವಯಸ್ಸು ಅಂದರೆ ೧೮೯೬ನೇ ಇಸವಿಯಲಿ ಮಾರ್ಗರೇಟ್ ಗ್ಲೇಡ್‌ಸ್ಟನ್ ಎಂಬವಳೊಡನೆ ವಿವಾಹವಾಗಿ (Lincoln, Inn fields No. 3) ಎಂಬಲ್ಲಿ ವಾಸಿಸಿದರು. ಕೆಲವು ವರ್ಷಗಳಲ್ಲಿ ಪತ್ನಿಯು ಸ್ವರ್ಗಸ್ಥಳಾದಳು.

೧೯೧೪ರ ಮಹಾಯುದ್ಧದ ಸಮಯದಲ್ಲಿ ಮೆಕ್ಡೊನಾಲ್ಡರು ಪ್ರದರ್ಶಿಸಿದ ನೈಪುಣ್ಯವು ಅವರನ್ನು ಉಚ್ಚಸ್ಥಾನಕ್ಕೊಯ್ದಿತು. ೧೯೨೪ರಲ್ಲಿ ಅವರು ಬ್ರಿಟಿಷ ಸಾಮ್ರಾಜ್ಯದ ಮಂತ್ರಿಪದವಿಯನ್ನು ಪಡೆದರು.

Contentment is natural wealth.

M. A.!!!

(ಲೇಖಕರು:—ಶ್ರೀ ಬಿ. ಗಂಗಾಧರದಾಸ್, ಬಿ. ಎ. ಮಂಗಳೂರು.)



ಮಧ್ಯ ರಾತ್ರೆ!-ಎಲ್ಲೆಲ್ಲಿಯೂ ನಿಶ್ಶಬ್ದ—ನೀರವ. ಸರ್ವರೂ ನಿದ್ರಾಲಲನೆಯ ಆಲಿಂಗನದಲ್ಲಿ ಸಿಲುಕಿ ಬಿದ್ದಿದ್ದಾರೆ. ಮುಂಬಾಯಿಯ ಶೇಟ್ ಲಕ್ಷ್ಮೀದಾಸರ ಮಗಳಾದ ಸೋರಾಬ್ಜಿಯು ನಾಲ್ಕು ಮಹಡಿಗಳ ಮೇಲಿರುವ ತನ್ನಂತಃಪುರದಲ್ಲಿ ನಿಶ್ಚಿಂತಳಾಗಿ ನಿದ್ರಿಸಿದ್ದಳು.

ಏನೋ ಒಂದು ಕನಸನ್ನು ಕಂಡು ಬೆಚ್ಚನೆ ಬೆಚ್ಚಿಬಿದ್ದು ಅವಳು ಮೆಲ್ಲನೆ ಕಣ್ಣುಬಿಟ್ಟಳು; ಕನಸನ್ನು ಸ್ಮರಣೆಗೆ ತಂದು ಒಂದು ನಿಮಿಷ ಹಾಗೆಯೇ ಮಲಗಿದ್ದಳು. ಅಷ್ಟರಲ್ಲಿ ತನ್ನ ಹಾಸಿಗೆಯ ಬಳಿ ಯಾರೋ ಚಲಿಸುತ್ತಿದ್ದ ಮೃದು ಸಪ್ಪಳವು ಕೇಳಿಸಿತು—ಕಿವಿಗೊಟ್ಟಳು—ಕೋಣೆಯಲ್ಲಿ ಯಾರೋ ನಡೆಯುತ್ತಿದ್ದಂತೆ ಭಾಸವಾಯಿತು. ಒಮ್ಮೆ ಭೀತಿಗೊಳಗಾದಳು, ಮತ್ತು ಕಿವಿಗೊಟ್ಟಳು; ಯಾರೋ ಪ್ರಯಾಸದಿಂದ ಉಸಿರಾಡುತ್ತಿದ್ದಂತೆ ಕೇಳಿಸಿತು. ಬಳಿಯಲ್ಲಿದ್ದ ವಿದ್ಯುಚ್ಛಕ್ತಿಯ ಸರಿಗೆಯ ಮೊಳೆಯನ್ನು ಹಿಡಿದೆಳೆದಳು—ಶಯ್ಯಾಗೃಹವು ಜಗ್ಗನೆ ಬೆಳಗಿತು.

ಅತ್ತ ಇತ್ತ, ಇತ್ತ ಅತ್ತ ಮೇಲೆ ಕೆಳಗೆ ಬೆದರಿದ ದೃಷ್ಟಿಯನ್ನು ಹಾರಿಸಿದಳು! ನೋಡುತ್ತಾಳೇನು? ದೀರ್ಘಕಾಯನಾದ ತರುಣನೊಬ್ಬನು ಕೈಯ್ಯಲ್ಲೊಂದು ಖಡ್ಗವನ್ನು ಹಿಡಿದುಕೊಂಡು ಗವಾಕ್ಷದ ಬಳಿ ನಿಂತಿದ್ದನು. ಕೊಠಡಿಯು ಅನಿರೀಕ್ಷಿತವಾಗಿ ಬೆಳಗಿದುದನ್ನು ಕಂಡು ದಿಗ್ಭ್ರಾಂತನಾದನು. ಕೈಯಲ್ಲಿದ್ದ ಖಡ್ಗವು ಕಟಾಲ್ಲನೆ ಕೆಳಬಿತ್ತು! ಸಿಕ್ಕಿ ಬಿದ್ದರೆ ಸೆರೆಗೊಳಗಾಗುವೆನೆಂದು ಮೊದಲೇ ನಿರ್ಧರಿಸಿದ್ದಂತೆ ನಿಂತಲ್ಲೆ ನಿಂತನು. ತಲೆಕೆಳಗಾಯಿತು. ಮನದ ಹಮ್ಮು ಕೆಳಹರಿಯಿತು. ಸರ್ವನಾಶವಾಯಿತೆಂದು ಬಗೆದು ತಟಸ್ಥನಾದನು.

ಸೋರಾಬ್ಜಿಯು 'ಬಾಪೂ!!!' ಎಂದು ಒಮ್ಮೆ ಅರಚಿಬಿಟ್ಟಳು. ಕ್ಷಣಮಾತ್ರದಲ್ಲಿ ಬಾಯಿಗೆ ಕೈ! ಅವಳ ಆರ್ಭಟವು ವಿದ್ಯುತ್‌ಪ್ರವಾಹದಂತೆ ತರುಣನ ಹೃದಯ ತಂತಿಯನ್ನು ಸಿಳ್ಳನೆ ಸೀಕರಿಸಿತು. ಕೂಡಲೇ ನಿಂತಲ್ಲೇ ಬಗ್ಗಿದನು . . . . . . ಮೊಣಕಾಲೂರಿಬಿಟ್ಟನು. ಅಧೋಮುಖ!

ಸೋರಾಬ್ಜಿಯು ಅವಾಕ್ಕಾದಳು; ಅವಳ ಭಯವು ನಿಮಿಷಾರ್ಧದಲ್ಲಿ ಧೈರ್ಯದ ರೂಪಾಂತರವಾಯಿತು. ಆಗಂತುಕನ ಎರಗುವಿಕೆಯು ಅವಳ ಹೃದಯವನ್ನೇ ಪರಿವರ್ತಿಸಿಬಿಟ್ಟಿತು. ಹಾಸಿಗೆಯಿಂದೆದ್ದು ನಿಂತಳು.

"ತೂಂ ಕೋಣ್ ಹೈ?" (ನೀನಾರು?) ಎಂದಳು.

ಅವಳು 'ಬಾಪೂ!' ಎಂದರಚಿದ್ದಳಷ್ಟೆ! ಪುಣ್ಯವಶಾತ್ ಅದಾರಿಗೂ ಕೇಳಲಿಲ್ಲ.

"ಉತ್ತರ ಕೊಡಬೇಕು! ಯಾರು?"

"ನಾನೊಬ್ಬ ಪಾಪಿ!"

"ಇಲ್ಲೇಕೆ ಬಂದೆ! ಕೊಲ್ಲಲೆ?"

"ಅಲ್ಲ—ದಾರಿದ್ರ್ಯನಾಶಕ್ಕಾಗಿ"

"ಅಂದರೆ?"

"ಕದ್ದು ದಿನಹರಣೆ ಮಾಡುವುದಕ್ಕೆ . . . ."

"ಇಲ್ಲಿ?"

"ಹೌದು"

"ಏನು ಬೇಕು?"

"ಹಣ!"

"ಇಲ್ಲಿಗೆ ಹೇಗೆ ಬಂದೆ?"

"ದಾರಿದ್ರ್ಯದ ಧೈರ್ಯ— "

"ನೀನು ಬಡವ?"

"ಹೌದು ವಿದ್ಯಾವಂತನಾದರೂ ಬಡವ?"

"ವಿದ್ಯಾವಂತ! ಇಂತಹ ಕೆಲಸ?"

"ಮುಂಬಾಯಿಯಲ್ಲಿ ನನ್ನಂತಹವರು ಸಾವಿರಗಟ್ಟಳೆ ಇರುವರು"

"ಹಣ ಸಿಕ್ಕರೆ ಹೋಗುವೆಯಾ?"

"ಹೌದು"

ಸೋರಾಬ್ಜಿಯು ತನ್ನ ವಜ್ರದ ಹಾರವೊಂದನ್ನು ಕೊರಳಿನಿಂದ ತಟ್ಟನೆ ತೆಗೆದು ಅವನ ಕೈಗೆಸೆದಳು.

ಗೋಪಾಲ್ ಬೈರಾಂಜಿಯು ಎಂ. ಎ. (M A.) ಕಲಿತು ನಿರುದ್ಯೋಗಿಯಾಗಿ ತಿರುಗಾಡುತ್ತಿದ್ದವನು. ಬಡ ಕುಟುಂಬವನ್ನು ಕ್ಷಣದಲ್ಲಿ ತೊರೆದು ತನ್ನ ಅದೃಷ್ಟಸಾಮರ್ಥ್ಯವನ್ನು ಪರೀಕ್ಷಿಸತೊಡಗಿದವನು. ನಾಲ್ಕು ವರ್ಷಗಳ ತನಕ ಅಲೆದು; ಬಳಲಿ, ಬೆಂಡಾಗಿ, ಸೋತನು—ನಿರಾಶನಾದನು—ಪ್ರಾಣರಕ್ಷಣೆಗಾಗಿ ಕಳ್ಳತನದ ವೃತ್ತಿಯನ್ನು ಕೈಕೊಂಡನು.

ಮುಂಬಾಯಿ, ೨೦-೮-'೩೨.

ಪ್ರಾಣದಾತಳೇ,

"ನಿನ್ನ ಹಾರವನ್ನು ಈ ಮೂಲಕ ರಿಜಿಸ್ಟ್ರಿ ಮಾಡಿ ನಿನ್ನ ತಂದೆ ವಿಳಾಸದಿಂದ ನಿನಗೆ ರವಾನಿಸಿರುವೆ. ಸ್ವೀಕರಿಸಿ ಕ್ಷಮಿಸು. ಗೌರೀ ಬೀದಿಯ ಕೆರೆಯಲ್ಲಿ ನಾಳೆ ನನ್ನ ಶವವನ್ನು ಕಾಣುವೆ—ಬಡತನವು ಹಾಳು! ಈ ಜೀವನವು ಅಂತ್ಯವಾಗಲಿ! ರಾತ್ರಿಯಲ್ಲಿ ಅನೇಕ ದರೋಡೆಗಳನ್ನು ಇಷ್ಟರ ತನಕವೂ ನಡೆಸಿ, ಹಗಲಲ್ಲಿ ಸಂಭಾವಿತನಂತೆ ಮೆರೆದ ನನ್ನ ಈ ಬಾಳು ನಾಶವಾಗಲಿ! ನಿನ್ನ ಧೈರ್ಯೌದಾರ್ಯಗಳಿಂದ ನನ್ನ ಹೃದಯವು ನೀರಾಗಿದೆ.

ಇಂತಿ,

ಗೋಪಾಲ್ ಬೈರಾಂಜಿ, ಎಂ. ಎ.

ಶೇಟ್ ಲಕ್ಷ್ಮೀದಾಸರು ಎಲ್ಲಾ ಸಂಗತಿಗಳನ್ನು ಮಗಳಿಂದ ತಿಳಿದರು. ಗೋಪಾಲ್ ಬೈರಾಂಜಿಯ ಮರಣಕ್ಕಾಗಿ ವ್ಯಥೆಪಟ್ಟರು.

ಲಕ್ಷ್ಮೀದಾಸ್ ರೋಡಿನಲ್ಲಿ ಒಂದು ದೊಡ್ಡ ದೀಪಸ್ತಂಭವಿದೆ. ಅದರ ಬುಡದಲ್ಲಿನ ಒಂದು ಕರಿಹಲಗೆಯಲ್ಲಿ ಹೀಗೆ ಕೆತ್ತಿದೆ:

"Civilization killed you!
Rot M. A.!!!"

When a man aims at nothing he seldom misses the target.

ಸಾದರ ಸ್ವೀಕಾರ ಮತ್ತು ವಿಮರ್ಶೆ.

ಸ್ವದೇಶಾಭಿಮಾನಿ—ಮಂಗಳೂರು. ಸಾರ್ವತ್ರಿಕವಾಗಿ ಹರಡಿದ ಉಜ್ವಲ ಕನ್ನಡ ವಾರಪತ್ರಿಕೆ. ರಾಜಕೀಯ, ಧಾರ್ಮಿಕ, ಸಾರ್ವಜನಿಕ ವಿಷಯಗಳನ್ನು ಪ್ರಕಟಿಸುತ್ತದೆ. ಮಾಸಾಂತ್ಯದಲ್ಲಿ ಸಾಹಿತ್ಯ ಸಂಚಿಕೆಯು ಹೊರಡುತ್ತದೆ. ವಾ. ಚಂ. ರೂ. ೬; ಪರಸ್ಥಳೀಯರಿಗೆ ರೂ. ೨—೧೩—೦.

ಕಂಠೀರವ—ಮಂಗಳೂರು. ಶ್ರೇಷ್ಟ ವರ್ಗದ ಕನ್ನಡ ವಾರಪತ್ರಿಕೆ. ಸಾರ್ವಜನಿಕ, ಸಾಂಪತ್ತಿಕ, ರಾಜಕೀಯ ವಿಚಾರಗಳನ್ನು ಸರ್ವಸಮ್ಮತವಾಗಿ ಪ್ರತಿಪಾದಿಸಿ ಕೀರ್ತಿ ಪಡೆದುದು. ವಾ. ಚಂದಾ—ಸ್ಥಳೀಯರಿಗೆ ರೂ ೨—೮—೦. ಪರಸ್ಥಳೀಯರಿಗೆ ೩—೫—೦.

ನವಯುಗ—ಮಂಗಳೂರು. ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ರಾಜಕೀಯ, ಸಾಮಾಜಿಕ ಮೊದಲಾದ ಅನೇಕ ವಿಷಯಗಳನ್ನು ನಿರ್ಭಯವಾಗಿ ಪ್ರಕಟಿಸುವುದು. ವಾ. ಚ. ಸ್ಥಳೀಕ ರೂ. ೨—೮—೦. ಪರಸ್ಥಳೀಯರಿಗೆ ರೂ. ೩—೪—೦.

ರಾಷ್ಟ್ರ ಬಂಧು—ಮಂಗಳೂರು. ಕಳೆದ ನಾಲ್ಕು ವರ್ಷಗಳಿಂದ ರಾಷ್ಟ್ರ ಸೇವಾನಿರತವಾದ ಸುಪ್ರಸಿದ್ಧ ವಾರ ಪತ್ರಿಕೆ. ಮಾಸಕ್ಕೊಮ್ಮೆ ಕಥೆಕವನೆಗಳಿಂದೊಡಗೂಡಿದ ಸಾಹಿತ್ಯ ಸಂಚಿಕೆಯನ್ನೂ ಪ್ರಕಟಿಸುತ್ತದೆ. ವಾ. ಚ. ಸ್ಥಳೀಯರಿಗೆ ರೂಪ್ಯಾ ೨—೮—೦. ಪರಸ್ಥಳೀಯರಿಗೆ ರೂ. ೩—೫—೦.

ದೇಶರಂಜನ—ದ್ವೈಮಾಸಿಕ.—ಮಂಗಳೂರು. ಸ್ಥ. ೨—೮—೦. ಪರಸ್ಥಳೀಯರಿಗೆ ರೂ. ೩. ದಕ್ಷಿಣ ಕನ್ನಡದಲ್ಲಿ ಏಕಮಾತ್ರ ದ್ವೈಮಾಸಿಕ. ಸುಪ್ರಸಿದ್ಧ ಬರಹಗಾರರ ಕಥೆ, ಪದ್ಯ, ಸಾಹಿತ್ಯ ಲೇಖನೇ ಮೊದಲಾದುವುಗಳಿಂದ ಶೃಂಗರಿಸಲ್ಪಡುವಂತಹದ್ದು. ತರುಣ ಸಂಪಾದಕರನ್ನು ಪ್ರತಿಯೊಬ್ಬ ಕನ್ನಡಿಗನೂ ಪ್ರೋತ್ಸಾಹಿಸಬೇಕಾಗಿದೆ. ವಾ. ಚ. ರೂ. ೩—೦—೦.

ತಾಯಿನಾಡು—ಬೆಂಗಳೂರು. ದೈನಂದಿನ ಮತ್ತು ವಾರಪತ್ರಿಕೆ. ಎ. ಪಿ. ಐ. ತಂತಿಗಳ ವಾರ್ತೆಗಳಿಂದ ಕೂಡಿರುವಂತಹದ್ದು. ಈಗೀಗ ರೂಟರ್ ತಂತಿಯೂ ಬರುತ್ತದೆ. ಪ್ರತಿಯೊಬ್ಬ ಕನ್ನಡಿಗನೂ ಪ್ರೋತ್ಸಾಹಿಸಬೇಕಾದುದು. ದೈನಿಕ ಪತ್ರಿಕೆಗೆ ವಾ. ಚ. ತಿಂಗಳಿಗೆ ಸ್ಥ. ೦—೧೨—೦. ಅಂಚೆವೆಚ್ಚ ೧—೦—೦.

ವಿಶ್ವಬಂಧು—ಮೈಸೂರು. ವಿವಿಧ ವಿಚಾರಗಳಿಂದ ಕೂಡಿದ ವಾರಪತ್ರಿಕೆ. ಜೈನ ಸಮಾಜದ ಅಂಗ. ಧಾರ್ಮಿಕ, ರಾಜಕೀಯ ವಿಷಯಗಳು ನಿತ್ಯವೂ ಪ್ರಕಟವಾಗುತ್ತಿವೆ. ವಾ. ಚ. ಸ್ಥ. ರೂಪ್ಯಾ ೨. ಪರಸ್ಥಳೀಯರಿಗೆ ರೂ. ೨—೧೩—೦.

ವಿಶ್ವಕರ್ನಾಟಕ—ಬೆಂಗಳೂರು. ರಾಜಕೀಯ ಸುದ್ದಿಗಳನ್ನೂ, ಮೈಸೂರು ಬೆಂಗಳೂರುಗಳ ವಿವಿಧ ವಿಷಯಗಳನ್ನೂ ಭಯಭೀತಿಯಿಲ್ಲದೆ ಚರ್ಚಿಸುವಂತಹ ಉಜ್ವಲ ವಾರಪತ್ರಿಕೆ. ವಾ. ಚ. ೩—೦—೦.

ಜೇಸುನಾಥರ ತಿರುಹೃದಯದ ದೂತ—ಮೈಸೂರು. ಅನೇಕ ಕಥೆ, ಹಾಸ್ಯ, ಬೋಧಪ್ರದ ಲೇಖ, ಧಾರ್ಮಿಕ ತತ್ವವಿಚಾರ, ಕ್ರೈಸ್ತಹಿತವಾದಗಳನ್ನು ನಿರ್ಭೀತಿಯಿಂದ ಸರ್ವಸಮ್ಮತವಾಗಿ ಹೊರಗೆಡಹುವ ಉಜ್ವಲ ಮಾಸಿಕ. ಕನ್ನಡ ಕ್ರೈಸ್ತರು ಮಾತ್ರವಲ್ಲ; ಕ್ರೈಸ್ತೇತರರೂ ತರಿಸಿಕೊಳ್ಳುವಂತಹದ್ದು. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೧—೦—೦.

ಕರ್ನಾಟಕ ಧುರೀಣ—ಕುಮುಟ. ಶ್ರೇಷ್ಟ ವರ್ಗದ ವಾರಪತ್ರಿಕೆ. ವಿವಿಧ ಸಂಗತಿಗಳನ್ನೂ ಮನಸ್ಸಿಗೊಪ್ಪುವ ಕವನಗಳನ್ನೂ ಪ್ರಕಟಿಸುತ್ತದೆ. ಕನ್ನಡಿಗರೆಲ್ಲರೂ ನೆರವಾಗಬೇಕು. ವಾರ್ಷಿಕ ಚಂದಾ ಟ. ಖ. ಸೇರಿ ೩—೧—೦.

ಜನ್ಮಭೂಮಿ—ಕೊಡಗು. ರಾಜಕೀಯ ವಿಷಯಗಳಿಂದೊಡಗೂಡಿದ ಉತ್ತಮವಾದ ವಾರಪತ್ರಿಕೆ. ನಾನಾ ತರದ ಪತ್ರವ್ಯವಹಾರ, ಕೊಡಗಿನ ವಾರ್ತೆಗಳಿಂದಲೂ ಕೂಡಿರುತ್ತದೆ. ಕನ್ನಡಾಭಿಮಾನಿಗಳೆಲ್ಲರೂ ಓದಬೇಕಾದುದು. ವಾ. ಚ. ೩—೦—೦.

ಸುಬೋಧ—ಬೆಂಗಳೂರು. ಉತ್ಕೃಷ್ಟವಾದ ಸಚಿತ್ರ ಮಾಸಿಕ. ವಿವಿಧ ಕಥೆ, ಕವನ, ಹಾಸ್ಯಲಹರಿ, ಚಾರಿತ್ರಿಕ ವಿಷಯ, ಕಲಾವಿಷಯ ಲೇಖ, ಮಹದ್ವ್ಯಕ್ತಿಗಳ ಚಿತ್ರಗಳು ಪ್ರಕಟವಾಗುತ್ತಿವೆ. ಸರ್ವರೂ ಸ್ವಾಧೀನದಲ್ಲಿರಿಸಬೇಕಾದುದೆಂದರೆ ಇದೇ ಈ ಮಾಸಿಕವನ್ನು. ವಾರ್ಷಿಕ ಚಂದಾ ರೂ. ೩.

ಪ್ರೇಮ—ತುಂಗಭದ್ರಾ. ಎಸ್. ಎಂ. ಐ. ಧಾರ್ಮಿಕ ವಿಷಯ ಲೇಖನಗಳಿಂದೊಡಗೂಡಿ ಸರ್ವಸುಂದರವಾಗಿ ಹೊರಡುವ ಮಾಸಿಕ. ಕನ್ನಡಿಗರ ಬೆಂಬಲವು ಅತ್ಯಗತ್ಯ. ವಾರ್ಷಿಕ ಚಂದಾ ೩—೦—೦.

ವಿಕಟ ವಿನೋದಿನಿ—ಬೆಂಗಳೂರು. ಹೆಸರು ಮಾತ್ರದಿಂದಲೇ ಗುಣ ತಿಳಿಯಬಹುದು. ಧಾರ್ಮಿಕ, ನೈತಿಕ, ಸಾಮಾಜಿಕ ವಿಷಯಗಳನ್ನು ವ್ಯಂಗ್ಯವಾಗಿ ಮನಸ್ಸಿಗೆ ನಾಟುವಂತೆ ಪ್ರಕಟಿಸುವಂತಹ ಮಾಸಿಕ. ಕನ್ನಡಿಗರೆಲ್ಲರೂ ತರಿಸಿಕೊಳ್ಳಬೇಕಾದುದು. ವಾ. ಚಂದಾ ೧—೦—೦. ಟ. ಖ. ಇಲ್ಲ.

ವಿನೋದ ಪ್ರಪಂಚ—ಬೆಂಗಳೂರು. ಹೆಸರಿಗೆ ತಕ್ಕಂತೆ ಪ್ರಪಂಚವನ್ನೇ ವಿನೋದಮಯವನ್ನಾಗಿ ಮಾಡಬಲ್ಲ, ಇಲ್ಲವೇ ತನ್ನಲ್ಲಿಯೇ ಇಡೀ ವಿನೋದ ಪ್ರಪಂಚವನ್ನೇ ತುಂಬಿಸಿಕೊಂಡಿರುವ ಮಾಸಿಕ ಪತ್ರಿಕೆಯೆಂದರೆ ಇದೊಂದೇ. ಎಂತಹ ದುಃಖಿತರನ್ನೂ ಒಮ್ಮೆಗೆ ನಗಿಸಿಬಿಡಲಿರುವ ಲೇಖನಗಳೇ ಇದರಲ್ಲಿ ಪ್ರಕಟವಾಗುವುವು. ಜಾಹೀರಾತಿಗೆ ಒಳ್ಳೇ ಕೇಂದ್ರ. ಇದಿಲ್ಲದ ಮನೆಯಿಲ್ಲ. ಎಲ್ಲರೂ ತರಿಸಿ ಓದಿಕೊಳ್ಳುವಂತಹದ್ದು. ವಾರ್ಷಿಕ ಚಂದಾ—ಏಜಂಟರ ಮೂಲಕ ರೂ. ೧. ಟಪ್ಪಾಲು ಮೂಲಕ ರೂಪ್ಯಾ ೧—೮—೦.

ಕಾದಂಬರಿ ಸಂಗ್ರಹ—ಮೈಸೂರು. ರಾಮಾಯಣ, ಪುರಾಣ, ವೇದ ಶಾಸ್ತ್ರಗಳ ಕುರಿತು ಮನೋರಂಜಕ ಲೇಖಗಳೂ, ಸಾಮಾಜಿಕ ಕಥೆಗಳೂ ನಿತ್ಯವೂ ಪ್ರಕಟವಾಗುತ್ತಿರುವ ಮಾಸಿಕ. ಸರ್ವರೂ ಸಂಗ್ರಹಿಸಿಡತಕ್ಕಂತಹದ್ದು. ವಾರ್ಷಿಕ ಚಂದಾ ರೂ. ೨—೦—೦.

ಅಹಿಂಸೆ—ಬೆಂಗಳೂರು. ಭೂತದಯಾಪರತೆ, ಅಹಿಂಸೆ, ಧರ್ಮತತ್ವಗಳ ಕುರಿತು ಉತ್ತಮ ಕಥೆಕವನಗಳಿಂದ ಸರ್ವಸುಂದರವಾಗಿ ಹೊರಡುವ ತ್ರೈಮಾಸಿಕ. ಕನ್ನಡಿಗರ ಬೆಂಬಲವು ಸದಾ ಇರಲೆಂದು ನಮ್ಮ ಕೋರಿಕೆ. ವಾ. ಚ. ೧—೦—೦.

ಶ್ರೀಕೃಷ್ಣ ಸಂದೇಶ—ಉಡುಪಿ. ಶ್ರೀಕೃಷ್ಣನ ವಿಷಯಕವಾದ ಭಗವದ್ಗೀತಾರ್ಥಗಳನ್ನೂ, ಲೌಕಿಕ, ಧಾರ್ಮಿಕ ವಿಷಯಗಳನ್ನೂ, ಕಥೆಕವನಗಳನ್ನೂ ಪ್ರಕಟೀಕರಿಸುವ ಮಾಸಿಕ ಪತ್ರಿಕೆ. ಕನ್ನಡಿಗರೆಲ್ಲರೂ ತರಿಸಿ ಓದಿಕೊಳ್ಳಬೇಕಾದುದು. ವಾರ್ಷಿಕ ಚಂದಾ ೧—೮—೦. ಅಂಚೆ ವೆಚ್ಚ ಸೇರಿ.

ಕರ್ನಾಟಕ ಕ್ರೈಸ್ತ ಬಂಧು—ಮಂಗಳೂರು. ಪಾಕ್ಷಿಕ ಪತ್ರಿಕೆ. ಕ್ರೈಸ್ತಹಿತವಾದದ ಸಂಗತಿಗಳನ್ನೂ, ಬೈಬಲಿನಲ್ಲಡಕವಾಗಿರುವ ನೀತಿಬೋಧೆಗಳನ್ನೂ ಸಾಮಾಜಿಕ ಕಥೆಗಳನ್ನೂ ಪ್ರಕಟಿಸುವುದು. ಕರ್ನಾಟಕಸ್ಥರೆಲ್ಲರೂ ಆಶ್ರಯಕೊಡಬೇಕಾಗಿ ಕೋರಿಕೆ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೧—೪—೦.

ರೆಡಿಕಲ್—ಬೋರಿ ಬಂದರ್, ಮುಂಬಾಯಿ. ಬ್ರಹ್ಮ ಸಮಾಜದ ಅಂಗವಾಗಿ ಪ್ರಕಟವಾಗುವ ಆಂಗ್ಲೇಯ ಭಾಷೆಯ ಪಾಕ್ಷಿಕ ಪತ್ರಿಕೆ. ಧಾರ್ಮಿಕ, ಸಾಮಾಜಿಕ, ನೈತಿಕ ವಿಚಾರಗಳನ್ನು ಪ್ರತಿ ಸಲವೂ ಪ್ರಕಟಿಸುವುದು. ಸಾರ್ವಜನಿಕರು ಸಹಕರಿಸಬೇಕಾದುದು. ವಾ. ಚಂದಾ ೨—೦—೦.

ಅಧ್ಯಾತ್ಮ ಪ್ರಕಾಶ—ಬೆಂಗಳೂರು. ಅಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ ವಿಷಯಗಳ ಮನೋಹರ ಲೇಖಗಳೊಂದಿಗೆ ಪ್ರಕಟವಾಗುವ ಮಾಸಿಕ ಪತ್ರಿಕೆ. ಪ್ರತಿಯೊಬ್ಬ ಕನ್ನಡಿಗನೂ ನೆರವಾಗಬೇಕೆಂದು ಪ್ರಾರ್ಥನೆ. ವಾ. ಚ. ೨—೦—೦.

ಸಾದರ ಸ್ವೀಕಾರ.

(೧.) ಆಯ್ದ ಹೂಗಳು. (೨) ನಾರಿಯಲ್ಲಾ ಮಾರಿ (೩) ಕಮಲೆ, (೪) ಮೂಲ್ಕಿ ಯೂನಿಯನ್ ಕ್ಲಬ್ಬಿನ ಹದಿನೇಳನೇ ವಾರ್ಷಿಕ ವರದಿ. (೫) ಮಾತ್ಸರ್ಯ ಅಥವಾ ಕಳವಾದ ಆಭರಣ. (೬) ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ (ವಣಿಕ ಸಂಘ)ದ ೩ನೇ ವಾರ್ಷಿಕ ವರದಿ—ಇವುಗಳ ವಿಮರ್ಶೆಯು ಬರುವ ಸಂಚಿಕೆಯಲ್ಲಿ ಪ್ರಕಟವಾಗುವುದು.

ಲಗ್ನಪತ್ರಿಕೆ! (?)

(ಲೇಖಕ—ಪಿ. ಎಸ್. ಆಚಾರ್ಯ, ಮಂಗಳೂರು.)

॥ **ಯಮಧರ್ಮರಾಯ ಪ್ರಸನ್ನಃ** ॥

ಮತ್ತೂ ಮತ್ತು ಶ್ರೀ ಮತ್ತು ಮತ್ಸರಸಂಪನ್ನರಾದ, ಸಕಲಗುಣಹೀನರಾದ, ವಿಶ್ವಾಸಘಾತರಾದ, ಸ್ವಾಮಿದ್ರೋಹಿಗಳಾದ ಚಾಂಡಾಳಮಾತ್ಯರಾದ, ತಸ್ಕರಶಿರೋಮಣಿಗಳಾದ, ದಾನಶೂನ್ಯರಾದ, ಊಟಕ್ಕೆ ತತ್ಪರರಾದ, ತೊಳೆದ ಕೆಂಡದಂತೆ ಮುಖವುಳ್ಳ ಭಂಡುಗಾರರಾದ, 'ಖಾನ್' ಬಹದೂರ, ರಾಜೇಶ್ರೀ ಕೆ. ಡಿ. ಕೆಪ್ಟ್ರಾನ್, M. A. D. ರವರಿಗೆ,—

ನಿಮ್ಮ ವಿಶ್ವಾಸರಹಿತರಾದ, ತಸ್ಕರಪುರದ ಪಕ್ಕಾರಾಯನು ಮಾಡುವ ಚಮತ್ಕಾರ:

ಇದೇ ಕಳೆದ

ಬಜೆ ಇಡ್ಲಿ ಶಕ ೦೦೦೧ಕ್ಕೆ ಸಲುವ, ತಳಮಳ ಸಂವತ್ಸರದ ಕಳವಳ ಮಾಸದ ಗಲಿಬಿಲಿ ವಾರದ ಬ. ಶು. ಹುಣ್ಣಿಮೆ ಅಮಾವಾಸ್ಯೆ ತಿಥಿ (ತಾ. 49⅓—19¾—0089¼)ಯಲ್ಲಿ ೫೯॥ ಘಳಿಗೆ (ಸ್ಟಿಂಡಾರ್ಡ್ ಘಂಟೆ 49¼)ಕ್ಕೆ ನಡಿಯುತ್ತಿರುವ ಕರ್ಕೋಟಕ ಲಗ್ನದಲ್ಲಿ, ಮರ್ಕಟಸ್ವರೂಪಿಯಾದ ನನ್ನ ಪುತ್ರಿ ಕರಿಯಮ್ಮಳನ್ನು,—ಸಿಕ್ಕದಪುರದ, ಪಕ್ಕಾ ಮಡ್ಪಣೆ ಚೋ. ರಾ. ತಕ್ಡೀ ಗೌಡರ ಮಗ ದಿವಂಗತ ಪಕ್ಡೀರಾಯನಿಗೆ ಕೊಟ್ಟು ತರ್ಪಣೆಬಿಡುವುದೆಂತ ನಿಶ್ಚಯಿಸಿರುತ್ತದೆ. ಆದ್ದರಿಂದ ಬಂಧುಗಳನ್ನು ಬಿಟ್ಟು, ತಾವು ತಮ್ಮ ಶತ್ರುಗಳೊಡಗೂಡಿ ಕಟ್ಟಿಗೆ ನೂರೊಡನೆ ಕಾಣದೆ ಬಂದು, ಈ ಶ್ರಾದ್ಧ ಕಾರ್ಯಕ್ಕೆ ತರ್ಪಣೆ ಬಿಡಿಸಿ ತಾಂಬೂಲ ಮಂತ್ರಾಕ್ಷತೆಗಳನ್ನು ಬಿಟ್ಟು, ಸತ್ಕಾರವಿಲ್ಲದೆ ಹೇಳದೆ ಹೋಗಬೇಕಾಗಿ ಕೋರುವ,

ತಮ್ಮಗಳ ನಿರಂತರ ಘಾತುಕ,

ತಸ್ಕರಪುರದ ಪಕ್ಕಾ ರಾಯರು ಮಾಡುವ ಮೋಸಸ್ಕಾರ

\+ + + + +

ಆಚಾರ್ಯ—ಭಟ್ಟರೆ! ಈ ದಿನ ದ್ವಾದಶಿಯಲ್ಲವೇ? ಇವತ್ತು ಹಲ್ಲುಜ್ಜುವುದು ಶಾಸ್ತ್ರ ವಿರೋಧವಲ್ಲವೇ?

ಭಟ್ರು—ನಿಜ. ನಿನ್ನೆ ತಿಂದ ತಾಂಬೂಲದ ರಂಗು ಹೋಗಬೇಡವೇ?

ಆಚಾರ್ಯ—ಏಕಾದಶಿಯಲ್ಲಿ ತಾಂಬೂಲ ಚರ್ವಣವೇ?

ಭಟ್ರು—ನೀರುಳ್ಳಿ ಬೆಳ್ಳುಳ್ಳಿ ತಿಂದ ಬಾಯಿಯ ವಾಸನೆಯು ತಾಂಬೂಲ ಚರ್ವಣದಿಂದಲ್ಲದೆ ಹೋಗುವುದೇ?

ಆಚಾರ್ಯ—ನೀರುಳ್ಳಿ, ಬೆಳ್ಳುಳ್ಳಿ ತಿನ್ನುವಿರಾ!

ಭಟ್ರು—ನೀರುಳ್ಳಿಲ್ಲದೆ ನಾಯಿಸ್ಪರ್ಶವಾದ ತಂಗಳನ್ನ ರುಚಿಸುವುದೇ?

\+ + + + +

'ಬಡವರ ಬಂಧು'ವಿನ ಮೇಲೆ ಪ್ರೀತಿಯಿಟ್ಟು ಅನೇಕ ಚಂದಾದಾರರನ್ನು ಸಂಪಾದಿಸಿದ ಮಹನೀಯರುಗಳ ಹೆಸರುಗಳು.

(ಕಳೆದ ಸಂಚಿಕೆಯಿಂದ ಮುಂದುವರಿಸಿದುದು.)

೧. ಶ್ರೀ ಕೆ. ರಾಘು, ಪುತ್ತೂರು. ೨. ಶ್ರೀ ಎ. ಚೂಡಪ್ಪ, ಮಂಗಳೂರು. ೩. ಶ್ರೀ ಎ. ಸಿ. ಕೋಟ್ಯನ್, ಮಂಗಳೂರು. ೪. ಶ್ರೀ ವಿ. ಎಸ್. ಬೋಳಾರ್, ಉಡ್ಪಿ. ೫. ಶ್ರೀ ಎ. ಸಂಜೀವ, ಅತ್ತಾವರ. ೬. ಶ್ರೀ ಎ. ಶಾಂತಿರಾಜ, ಅತ್ತಾವರ. ೭. ಶ್ರೀ ಎನ್. ಸುಂದರರಾವ್, ಮಂಗಳೂರು. [ಸಶೇಷ.

Horse shoes and luck are scarce—work!

"ಬಡವರ ಬಂಧು"ವಿನ ಬುಡು ಬುಡುಕೆ.

[illegible] ಜಯ ನಿಮಗಾಗಲಿ ಸ್ವಾಮಿ!
[illegible] ಕರ್ಣಾಟಕ ಮಾತಾ!!
[illegible] ಬುಡುಕ್, ಬುಡುಬುಡು ಬುಡುಕ್!!!

"[illegible] ಬಂಧು"ವು ನಾನಿಹೆನಯ್ಯಾ!
[illegible] ಅಲ್ಲಯ್ಯಾ!
[illegible]ದಲಿ ಬಡವಾದವರಿಗು—
[illegible] ಬಂಧುವು; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

[illegible]ಗೆ ಬಡತನವಿದ್ದರೆ, ಕೃಷಿಗೆ—
[illegible]ಸಿಯಿರಿ ತೋಟಿಕೆ; ಸ್ವಾಮಿ!
[illegible] ಬಡತನವಿದ್ದರೆ, ತಕಲಿಯು—
[illegible] ನೂಲ ನೇಯಿರಿ: ಓ ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

[illegible] ಕಾಣಲು ಬಡವಾದರೆ,—
[illegible]ನ ಮದವನು ತ್ಯಜಿಸಿರಿ; ಸ್ವಾಮಿ!
[illegible]-ಪರವೆರಡರೊಳ್ಳೆ ಸಿರಿವಂತನು—
[illegible]ದ ಸದ್ಗೃಹಪತಿ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

[illegible]ಯಿಸ್ಸು ವಿನಯವು ಬಡವಾದರೆ—
[illegible]ರ್ರೆ, ಗರ್ವವ; ಸ್ವಾಮಿ!
[illegible]ದ್ಯಾಭರಣವ ಧರಿಸಿದವಗೆ—
[illegible]ಸಿದಂತೆಯೆ ಸಿರಿಯುಸು; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

[illegible]ತಿ—ಪತಿ ಸೊಗದೊಳು ಬಡತನ ತಡೆಯಲು—
[illegible] ಮದುವೆಯೇ ಸಾಧನ; ಸ್ವಾಮಿ!
ಸಂಸಾರದ ರಥಕೆರಡು ಗಾಲಿಗಳು—
ಗಂಡ—ಹೆಂಡಿರೀರ್ವರರೆ, ನಿಜ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಮನೆಯಂಡಕೆ ಬಡವಿದ್ದರೆ, ಒಳ್ಳೆಯ—
ತನಯರ ಪಡೆಯಲು ಬೇಕೈ; ಸ್ವಾಮಿ!
[illegible] ಸುಜನರು ಜನಿಸಲಿಕ್ಕೆ ಸದ್—
[illegible]ಹರ್ಯಪಾಲನೆ ಸರಿ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

[illegible] ಬಡತನ ಜಾರದೆ ತಡೆಯಲು—
ಓಡಿಸಿ ರೋಗದ ಮಾರಿಯ; ಸ್ವಾಮಿ!
ಶೀಸಿ—ಶಾಸನಗಳರಿಪನು ತೋರೆವುದೆ—
ನಾಸಿ ರೋಗಗಳ ಕಾರಣ; ಸ್ವಾಮಿ!
[illegible] ಬುಡುಕ್, ಬುಡುಬುಡು ಬುಡುಕ್!

[illegible]ಷಕೆ ಬಡತನ ಬಂದರೆ, ಸೀ—
[illegible]
[illegible]
[illegible]
[illegible]

(ಲೇಖಕರು—ಶ್ರೀ. ಹೊ. ರಂಗರಾಯ, ಮಾದರಬೆಟ್ಟು.)

ಸುಗುಣಕೆ ಬಡತನ ಬಂದರೆ, ಬಿಡಿರೈ—
ಕುಗುಣ—ಕುಚಟಗಳನೆಲ್ಲವ; ಸ್ವಾಮಿ!
ದುರ್ಜನ ಸಂಗವ ಮಾಡದೆ ಇದ್ದರೆ—
ದುರ್ಗುಣ ಬಾರದು; ಸತ್ಯವು; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಗೃಹದಲಿ ಶಾಂತಿಗೆ ಬಡತನ ಬಂದರೆ,
ಗೃಹಕಲಹವ ನಿಲ್ಲಿಸಿರೈ; ಸ್ವಾಮಿ!
ಸಾಧಾರಣ ಗೃಹಕಲಹವು ಹೆಂಗಳ—
ವಾದದಲೇ ಹುಟ್ಟುವುದೈ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಚುರುಕಿಗೆ ಬಡತನ ಬಂದರೆ, ಕೂಡಲೆ—
ಹರಿದೊಗೆಯಿರಿ ಆಲಸ್ಯವ; ಸ್ವಾಮಿ!
ಅಲಸಿಕೆ ತೊರೆಯಲು, ನೀವು ನಿರಂತರ—
ಕೆಲಸದಲಿರುವುದೆ ಸಾಧನ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಯಾವಾಗಲು ಸದುದ್ಯೋಗದಲೇ
ನೀವಿದ್ದರೆ ಮೇಲಾಗ್ವಿರಿ; ಸ್ವಾಮಿ!
ಕರ್ಮಭೂಮಿಯಾದಿಲ್ಲಿ ಹುಟ್ಟಿದುದು—
ಸುಮ್ಮನೆ ಇರಲಿಕ್ಕಲ್ಲವು; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಇರುಳಲಿ ಬೇಗನೆ ಮಲಗಿ, ನಿದ್ರೆಯನು—
ತೊರೆಯಿರಿ ಬೆಳಗಿಗೆ ಮುಂಚೆಯೆ; ಸ್ವಾಮಿ!
ಬೇಗನೆ ನಿದ್ರಿಸಿ ಬೇಗನೆ ಎದ್ದರೆ
ಸೀಗರದಲಿ ಮೇಲಾಗ್ವಿರಿ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಕಷ್ಟದ ಧನವೇ ಕಷ್ಟಕೆ ನೆರವಿದು—
ಸ್ಪಷ್ಟವು; ನ್ಯಾಯದಿ ಬಾಳಿರಿ; ಸ್ವಾಮಿ!
ಸತ್ಯವ ನುಡಿಯುತೆ, ಧರ್ಮದಿ ನಡೆಯುತ—
ಉತ್ತಮ ಕೀರ್ತಿಯ ಗಳಿಸಿರಿ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

"ಬಡವರ ಬಂಧು"ವು ಈ ಬುಡು ಬುಡುಕಿಗೆ—
ಕೊಡಿ ದಯದಿಂದಾಶ್ರಯವನ್ನು; ಸ್ವಾಮಿ!
ವರುಷಕ್ಕೊಂದು ರೂಪಾಯಿಯ ನೀಡಲು—
ಪರಮ ಹರುಷವನು ತಾಳುವೆ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಪ್ರತಿ ತಿಂಗಳು ಬರುವೆನು ನಿಮ್ಮೆಡೆಗೆ—
ಕತೆ, ಪದ, ವಾರ್ತೆ, ವಿನೋದಗಳೊಡನೆ;
'ನಾರದ'—'ಮೈಸೂರ್ ವರ್ಣಣ್ಣ'ರುಗಳ—
ಭಾರಿ ಲೀಲೆಯೊಡಗೂಡುತ; ಸ್ವಾಮಿ!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಎಲ್ಲೆಲ್ಲಿಯು ಸನ್ಮಂಗಲವಾಗಲಿ!!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಜಯಜಯ ಜಯ ನಿಮಗಾಗಲಿ, ಸ್ವಾಮಿ!
ಜಯಜಯ ಜಯ ಕರ್ಣಾಟಕ ಮಾತಾ!!
ಬುಡುಬುಡು ಬುಡುಕ್, ಬುಡುಬುಡು ಬುಡುಕ್!

ಕನ್ನಡ ಭಾಷೆಯು ಉನ್ನತಿಯಾಗಲಿ!
ಕನ್ನಡಿಗರ ಬಿಂಕವು ಅದಕಿರಲಿ!!
ಎಲ್ಲೆಲ್ಲಿಯು ಸುಖ—ಶಾಂತಿಯು ನೆಲಸಲಿ!

(೫ನೇ ಪುಟದಿಂದ ಮುಂದುವರಿಸಿದ್ದು.)

ಹೋಗು!! ನಡೆ!!! ನಿನ್ನ ಈ ಪುತ್ಥಳಿಯ ಬೊಂಬೆಗೆ ಹೊತ್ತು ಹೊತ್ತಿಗೆ ಮೊಲೆಯುಣ್ಣಿಸುತ್ತಾ ಹೊತ್ತು ಕೊಂಡಿರು! ಹೂಂ! ನಡೆ!!" ಇನ್ನರೆಕ್ಷಣ ಶೀತು ಅಲ್ಲೇ ಇರುತ್ತಿದ್ದರೆ? ಹೊಡೆಸಿ—ದೂಡಿಸಿಕೊಳ್ಳುವ ಪ್ರಸಂಗವೊದ ಗುತ್ತಿತ್ತು.

ವಾಚಕ! ಶೀತುವೀಗ ಭಿಕ್ಷುಕಿ—ಹುಚ್ಚಳು. ಅವಳು ಹಾಗೆ ಭಿಕ್ಷುಕಿ—ಹುಚ್ಚಳಾದುದು ಶ್ರೀಮಂತ ಪಾರ್ವತಮ್ಮನವರ ಎದೆಯಲ್ಲಿ ಹೃದಯವಿಲ್ಲದುದರಿಂದಲ್ಲವೇ? ಹಾಗೆ ಅವರ ಎದೆಯು ಹೃದಯಶೂನ್ಯವಾಗಿರಬೇಕಾದರೆ, ಐಶ್ವರ್ಯವು ಅದೆಷ್ಟು ಕ್ರೂರಾತ್ಮಕವೋ ಆದನ್ನಾರು ಬಲ್ಲ! ಇದಕ್ಕಾಗಿ ಅಲ್ಲವೇ ಬುದ್ಧಿವಂತರು "ಸಿರಿಯು ಜಾರದೆ ಇರಲಿ! ಬಡತನವು ನೆಲಸಿರಲಿ!" ಎನ್ನುವುದು? ಮನಃಶಿಲೆಗೆ ದಾರಿದ್ರ್ಯ ದುಃಖತರಂಗದೊಡನೆ ಅಪಮಾನ ಅಸೂಯೆಗಳ ಅಲೆಗಳೂ ಕೂಡಿ ಅಧಿಕವಾಗಿ ಅಪ್ಪಳಿಸಿದರೆ, ಅವುಗಳ ತಾಡನದಿಂದೊಂದು ತರದ ಗಂಭೀರತೆಯೆಂಬ ಬೆಳ್ನೊರೆಯೇಳುವುದು ಸ್ವಾಭಾವಿಕವು! ಕಡೆಗೆ ಆ ಗಂಭೀರತೆಯೇ ಹುಚ್ಚಾಗಿ ಮಾರ್ಪಾಟು ಹೊಂದುವುದೂ ಪ್ರಕೃತಿಯ ಲಕ್ಷಣ.

ಈ [illegible] ನಿಲ್ಲ. ಅದು ತನ್ನ ತಂದೆಯ ದಾರಿಯನ್ನು ಹಿಡಿದಿತ್ತು—ತನ್ನ ತಾಯಿಯು ತನ್ನ ಕಂಕುಳಲ್ಲಿ ಶ್ರೀಮಂತರ ಮಕ್ಕಳನ್ನೆತ್ತಿಕೊಳ್ಳುತ್ತಿರಲೆಂಬ ಉದಾರ ಭಾವನೆಯಿಂದ ಮುಂದೆ ಸಾಗಿದ್ದಿತು.

ಪ್ರಿಯ ವಾಚಕ! ಈ ಹಾಳು ಹೊಟ್ಟೆಯೊಂದಿಲ್ಲದಿರೆ ಶೀತುವಿನಂತಹ ಬಡಮಾತೆಯರ ಎಷ್ಟು ಕಂಕುಳಗಳು ಶ್ರೀಮಂತರ ಮಕ್ಕಳಿಗಾಗಿ ಮೀಸಲಾಗಿಡಲ್ಪಡಲಿಲ್ಲ? ಉದರವಿರುತ್ತಿದ್ದಿಲ್ಲವಾದರೆ ....?

Dont waste time looking at your hill; climb it

"ಬಡವರ ಬಂಧು"ವಿನ ಅರೆ ವರ್ಷದ ಸ್ಮರಣೆಗಾಗಿ

ಬಿಚ್ಚುಗರಿಗೆ ಇನ್ನೊಂದು ಪದಕ!

ಎರಡು ರೂಪಾಯಿ!——————ಮೂರು ಗ್ರಂಥಗಳು

ಒಗಟುಗಾರ—ಎನ್. ಟಿ. ಸುವರ್ಣ, ಮುಂಗಳೂರು.

ನಿಮ್ಮ ಸಾಮರ್ಥ್ಯ!

ಎಡದಿಂದ ಬಲಕ್ಕೆ:—

೧, ೨, ೩ ಎತ್ತು.
೪, ೫, ೬ ಕವಿತೆ.
೭, ೮ ಬೆಲೆ.
೧೦, ೧೧ ಆಭರಣ
೧೩, ೧೪, ೧೫ ಚಾಡಿಗಾರ ಮುನಿಯೊಬ್ಬ.
೧೭, ೧೮ ಕತ್ತರಿಸು.
೧೯, ೨೦ ಪತಿ.
೨೨, ೨೩, ೨೪ ವಿಷ.
೨೬, ೨೭ ನೂರ
೨೯, ೩೦ ಅರಿಷಡ್ವೈರಿಗಳಲ್ಲೊಂದು.
೩೧, ೩೨, ೩೩ ಶರಧಿ.
೩೪, ೩೫, ೩೬ ಸುತನ.

ನಿಮ್ಮ ಜ್ಞಾನದ ಸತ್ವಪರೀಕ್ಷೆ!

1	2	3	■	4	5	6
7	8	■	9	■	10	11
12	■	13	14	15	■	16
■	17	18	■	19	20	■
21	■	22	23	24	■	25
26	27	■	28	■	29	30
31	32	33	■	34	35	36

ನಿಮ್ಮ ಬುದ್ಧಿ ಶಕ್ತಿ

ಮೇಲಿಂದ ಕೆಳಗೆ:—

೧, ೭, ೧೨ ಕಾಯಿಪಲ್ಯಗಳಲ್ಲೊಂದು.
೨, ೮ ಹಾರ.
೫, ೧೦ ಕಾಡು.
೬, ೧೧, ೧೬ ಪಟ್ಟಣ.
೧೩, ೧೮, ೨೨ ಊರಿನವ.
೯, ೧೪ ಕೈ.
೧೫, ೧೯, ೨೪ ಶ್ವೇತ.
೨೧, ೨೬, ೩೧ ಅಂಬರ.
೨೭, ೩೨ ವೃಕ್ಷ.
೨೮, ೩೪ ಸುತ.
೨೫, ೩೦, ೩೬ ಸಾಮಗ್ರಿ.

ಈ ತೃತೀಯ ಒಗಟಿಗೆ ಮೂರು ಬಹುಮಾನಗಳು.

೧. ಹೈದರಾಬಾದಿನ ಶ್ರೀ. ಡಿ. ಪುತ್ರನ್ ಎಂಬ ಮಹನೀಯರು ಈ ಸಲದ ಒಗಟಿನ ಬಿಚ್ಚುಗರಿಗೆ ಪ್ರಥಮ ಬಹುಮಾನವಾಗಿ ತನ್ನ ಸ್ವಂತ ವೆಚ್ಚದಿಂದ ಬೆಳ್ಳಿಯ ಪದಕ ಒಂದನ್ನು ಕೊಡುವೆನೆಂದಾಶ್ವಾಸನೆಯಿತ್ತಿರುವರು. ಅದು ಬೇಗನೇ ನಮ್ಮ ಕೈ ಸೇರಲಿರುವುದು.

೨. ನಮ್ಮ ದ್ವಿತೀಯ ಬಹುಮಾನವಾಗಿ ನಗದಿ ೨ ರೂಪಾಯಿಗಳನ್ನು ಕೊಡಲಾಗುವುದು.

೩. ತೃತೀಯ ಬಹುಮಾನವಾಗಿ ಈ ಒಗಟುಗಾರರು ಕಳುಹಿಸು[…] ಮೂರು ಗ್ರಂಥಗಳು ಕೊಡಲ್ಪಡುವುವು.

ಸೋಡ್ತಿಯ ಮೂಲಕ ಬಹುಮಾನಗಳು ಹಂಚಲ್ಪಡುವುವು.

ಸರ್ವರೂ ನಿತ್ಯದಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಕಳೆದ ಸಲದ ನಂಬ್ರ ೨ನೇ ಒಗಟಿಗೆ ಸಮರ್ಪಕವಾಗಿ ಉತ್ತರವಿತ್ತ ಮಹನೀಯರುಗಳ ಹೆಸರುಗಳು:

೧ ಶ್ರೀಗಳಾದ ಕೆ. ಎಂ. ಶೆಟ್ಟಿ, ಬಿ. ಎ. ಅಸಿಸ್ಟಾಂಟ್ ಕೆನರೀಸ್ ಟ್ರಾನ್ಸ್ಲೇಟರ್ ಟು ಗವರ್ನಮೆಂಟ್, ಮದ್ರಾಸು. ೨ ಬಿ. ಸುಂದರ್ ರಾವ್, ಇಲೆಕ್ಟ್ರಿಕಲ್ ಡೆಮೋನ್‌ಸ್ಟ್ರೇಟರ್, ಮದ್ರಾಸು. ೩ ಡಾ। ಕೆ. ಟಿ. ಎನ್. ಭಂಡಾರಿ, ಸೋಮವಾರಪೇಟೆ. ೪ ಎಂ. ಬಿ. ಶೆಟ್ಟಿ, ಮುಂಬಾಯಿ. ೫ ಕೆ. ಟಿ. ಕರ್ಕೇರ. ಮುಂಬಾಯಿ. ೬ ಸೋಮಪ್ಪ ಬಿ. ಶೆಟ್ಟಿ, ಮುಂಬಾಯಿ. ೭ ತುಕ್ರ ಟಿ. ಸಾಲಿಯಾನ್, ಮುಂಬಾಯಿ. ೮ ಕಾರ್ಕಳ ವೆಂಕಟ್ರಾವ್ ಪ್ರಭು, ಮುಂಬಾಯಿ. ೯ ವಿಠಲ್ ಕೆ. ಶೆಟ್ಟಿ, ಮುಂಬಾಯಿ. ೧೦ ಎಸ್. ತಿಮ್ಮಪ್ಪ, ಮುಂಬಾಯಿ. ೧೧ ಎ. ತಿರುವೆಂಕಟಾಚಾರ್, ಚಾಮರಾಜನಗರ ಮೈಸೂರು. ೧೨ ಸಿ. ಎನ್. ನರಸಿಂಹ ಶಾಸ್ತ್ರಿ, ಚಾಮರಾಜನಗರ ಮೈಸೂರು. ೧೩ ಬಿ. ವೆಂಕಟಕೃಷ್ಣಯ್ಯ, ಕೊಪ್ಪ ಕಡೂರು. ೧೪ ಎ. ವಿ. ಶೇಷ ಅಯ್ಯಂಗಾರ್ ಮೈಸೂರು. ೧೫ ಕೆ. ಪಿ. ಚನ್ನಪ್ಪ, ಸರಕಾರೀ ಪ್ರಾಥಮಿಕ ಶಾಲೆ, ಚಿಕ್ಕಮಗಳೂರು. ೧೬ ಎಂ. ಜಿ. ಅಪ್ಪಣ್ಣ, ವಿದ್ಯಾರ್ಥಿ ಸೆಂಟ್ರಲ್ ಸ್ಕೂಲ್, ಮಡಿಕೇರಿ. ೧೭. ಎಂ. ನಾರಾಯಣ ಭಟ್, ಸುದರ್ಶನ ಹೊಟೇಲು ಮಲ್ಪೆ. ೧೮ ಬಿ. ಗೋಪಾಲ ಕೃಷ್ಣಯ್ಯ, ಪಂಜ ೧೯ ಆರ್. ಕೆ. ಸುಬ್ರಾಯ, ಸ್ಕೂಲ್ ಎಂಡ್ ಪೋಸ್ಟ್ ಮಾಸ್ಟರ್, ಬಣ್ಕಲ್[…] ೨೦ ಕೆ. ಬಿ. ರಾಮ ರಾವ್, ಮುಂಬಾಯಿ. ೨೧ ಗೋಪಾಲಕೃಷ್ಣ ಅಡಿಗ, ಮೊಗೇರಿ[…] ಬೈಂದೂರು. ೨೨ ವೈ. ಬಿ. ಸುಬ್ರಹ್ಮಣ್ಯಂ, ಕೊಪ್ಪ ಕಡೂರು. ೨೩ ವಿ. ಜಿ[…] ಹೆಗ್ಡೆ, ಫರಂಗಿಪೇಟೆ. ೨೪ ಸೆಕ್ರಿಟರಿ ದಿ ಎಜ್ಯುಕೇಶನಲ್ ಸೊಸ್ಯಾಟಿ, ಫರಂಗಿಪೇಟೆ[…] ೨೫ ಎ. ಕೆ. ಸುಂದರ ಶೆಟ್ಟಿ, ವಿದ್ಯಾರ್ಥಿ, ಫರಂಗಿಪೇಟೆ. ೨೬ ಪೈಲೂರು ಕೃಷ್ಣಯ್ಯ[…] ಸುಳ್ಯ. ೨೭ ಎಂ. ಬಸಪ್ಪ, ಉಪಾಧ್ಯಾಯ, ಪಡುಬಿದ್ರಿ. ೨೮ ಶ್ರೀಮತಿ ಇಂದಿರಾ ಬಾ[…] ವಿದ್ಯಾರ್ಥಿನಿ, ಶ್ರೀ ರಾಮ ಹಾಯರ್ ಎಲಿಮೆಂಟರಿ ಶಾಲೆ, ಫರಂಗಿಪೇಟೆ. ೨೯ ಎ[…] ಕೆ. ಸದಾಶಿವ ಶೆಣೈ, ವಿದ್ಯಾರ್ಥಿ, ಶ್ರೀ. ರಾ. ಹಾ. ಎ. ಶಾಲೆ, ಫರಂಗಿಪೇಟೆ[…] ೩೦ ಮಂಗಲಪಾಡಿ ಸೀತಾರಾಮಯ್ಯ, ಸುಳ್ಯ. ೩೧ ಎ. ನಾರಾಯಣ ರಾವ್[…] ಉಪಾಧ್ಯಾಯ, ಶ್ರೀ. ರಾಮ ಹಾ. ಎ. ಸ್ಕೂಲು, ಫರಂಗಿಪೇಟೆ. ೩೨ ಬಿ. ಜಿ. ಗಣಪ[…] ಮುಂಬಾಯಿ. ೩೩ ರಾಮ ಎ. ಕೋಟ್ಯಾನ್ ಕಾರ್, ಮುಂಬಾಯಿ. ೩೪ ಶೇಷಪ್ಪ ಜಿ[…] ಶಿರಿಯಾನ್, ಮುಂಬಾಯಿ. ೩೫ ಯು. ವೀರಪ್ಪ, ಮುಂಬಾಯಿ. ೩೬ ಕೆ. ಪದ[…]

ಕೇಬರ್, ವಿದ್ಯಾರ್ಥಿ, ಮೂಲ್ಕಿ ಬೋ. ಹಾ. ಎ. ಶಾಲೆ, ಮೂಲ್ಕಿ. ೩೭ ಬಿ. ಶಾಮ ಭಟ್, ಮಲ್ಪೆ. ೩೮ ಬಿ. ಕೆ. ಪಾಂಡುರಂಗ ಪೈ, ಬ್ರಹ್ಮಾವರ. ೩೯ ಮಂಜುನಾಥ ಬಿ. ಅಮೀನ್, ಮುಂಬಾಯಿ. ೪೦ ಎಸ್. ಎ. ವಾಸುದೇವ ನಾಯಕ್, ಕೊಪ್ಪ ೪೧ ಕಡಂಬಿಲ ಗೋವಿಂದ ಭಟ್ಟ, ಕಡಂಬಿಲ. ೪೨ ಪಿ. ವಿ. ನಾಗರಾಜ ಚೆಟ್ಟಿ, ಹೊಳೆನರಸಿಪುರ. ೪೩ ಬಿ. ನರಸಿಂಹ ಬಾಳಿಗ, ಬಂಟ್ವಾಳ. ೪೪ ಪಂಡಿತ್ ಕೊಡಿಯಾಲ್ ತಿಮ್ಮಪ್ಪ, ರಥಬೀದಿ, ಮಂಗಳೂರು. ೪೫ ಎಸ್. ಎಸ್. ಬೋಳೂರು, ಮಂಗಳೂರು. ೪೬ ಬಿ. ಬಾಬು ರಾವ್ ಗವರ್ನಮೆಂಟ್ ಕೋಲೇಜ್ ಮಂಗಳೂರು. ೪೭ ಬಿ. ಜನಾರ್ಧನ ನ್ಯಾಕ, ಬೋಳಾರ, ಮಂಗಳೂರು. ೪೮ ಸಿ. ಕೆ. ರಾಮಕೃಷ್ಣಯ್ಯ, ಕೊಮನ್‌ವೆಲ್ತ್ ಹೊ. ಫೆ. ಬಲ್ಮಠ, ಮಂಗಳೂರು. ೪೯ ಬಿ. ಕೆ. ಶೆಣೈ, ಮರ್ಚೆಂಟ್, ಮಂಗಳೂರು. ೫೦ ಕೊಲ್ಲಾಪುರ ಭವಾನಿ ರಾವ್, ಕದ್ರಿ ರೋಡ್, ಮಂಗಳೂರು. ೫೧ ಶ್ರೀನಿವಾಸ ಪೆಜತಾಯ, ಕದ್ರಿ ಮಂಗಳೂರು. ೫೨ ಕೆ. ಬಾಬು ಟೈಲರ್. ರಥಬೀದಿ ಮಂಗಳೂರು. ೫೩ ಕೆ. ಈಶ್ವರ ಭಟ್, ಸೈ. ಎಲೋಸಿಯಸ್ ಕೋಲೇಜ್, ಮಂಗಳೂರು. ೫೪ ಕೆ. ರುದ್ರಪ್ಪ, ಬಿಜೈ ಮಂಗಳೂರು. ೫೫ ಶ್ರೀಮತಿ ಕೆ. ರಾಧಾಬಾಯಿ, ಚುಡ್ವೆಗಲ್ಲಿ ಮಂಗಳೂರು. ೫೬ ಎಸ್. ಮುಚ್ಚಿಗಂಧಿಬಾಯಿ, ಬೋಳೂರು ಮಂಗಳೂರು. ೫೭ ಎಸ್. ಟಿ. ಸುವರ್ಣ, ಬೋಳೂರು ಮಂಗಳೂರು ೫೮ ಎ. ಬಿ. ಇಬ್ರಾಹಿಮ್, ಟ್ರೈನಿಂಗ್ ಕ್ಲಾಸ್ ಗವರ್ನಮೆಂಟ್ ಕೊಲೆಜ್, ಮಂಗಳೂರು. ೫೯ ಕೆ. ದೇವೇಂದ್ರ, ಹಜೂರು ಆಫೀಸು ಮಂಗಳೂರು. ೬೦ ಬಿ. ಗಂಗಯ್ಯ, ಬಂದರ, ಮಂಗಳೂರು. ೬೧ ಕೆ. ಭಾಸ್ಕರ್ ಪೈ, ಸಿ. ಪಿ. ಸಿ. ಕಂಪೆನಿ, ಮಂಗಳೂರು. ೬೨ ಬಿ. ಗೋಪಾಲಕೃಷ್ಣ, C/o ಎ. ನಾಗಪ್ಪ ಮೆಕ್ಮಿಲನ್ ಗಾರ್ಡನ್ಸ್, ಮಂಗಳೂರು. ೬೩ ಎ. ಶಾಮರಾವ್. ಸರಸ್ವತಿ ಭವನ ಮಂಗಳೂರು. ೬೪ ಕೆ. ಓಮಯ ಶೆಟ್ಟಿ, ಕೆನರಾ ಛಾಪಖಾನೆ ಮಂಗಳೂರು. ೬೫ ಎಂ. ರಾಮದಾಸ ಪೈ, ಮರ್ಚೆಂಟ್, ಗಣಪತಿ ದೇವಸ್ಥಾನ ಮಾರ್ಗ, ಮಂಗಳೂರು. ೬೬ ಕೊಡಿಯಾಲಗುತ್ತು ಭಾಸ್ಕರ ರೈ, ಕೆನರಾ ಹೈಸ್ಕೂಲು, ಮಂಗಳೂರು. ೬೭ ಕೆ. ದೇವಪ್ಪ ಶೆಟ್ಟಿ. ಕೊಡಿಯಾಲಗುತ್ತು, ಮಂಗಳೂರು. ೬೮ ಚಿತ್ರಾಪು ಶ್ರೀನಿವಾಸ ರಾವ್. ಕೆನರಾ ಹೈಸ್ಕೂಲ್, ಮಂಗಳೂರು. ೬೯ ಕಿಲ್ಪಾಡಿ ಕೃಷ್ಣರಾವ್, ಅತ್ತಾವರ ಮಂಗಳೂರು. ೭೦ ಕೆ. ದೂಮಪ್ಪ, ಕಂಕನಾಡಿ, ಮಂಗಳೂರು. ೭೧ ಎ. ಸೋಮಪ್ಪ, ಟೈಲರ್. ಮೈದಾನ್ ರೋಡ್, ಮಂಗಳೂರು. ೭೨ ಟಿ. ಚಂದ್ರರಾಜ ಶೆಟ್ಟಿ, ಸಿದ್ದಕಟ್ಟೆ. ೭೩ ಗುರ್ಪುರ ಮಾಧವ ಪೈ, ಪುತ್ತೂರು.

ಬಿಚ್ಚುಗರು ಒಂದಾಣೆ ಸ್ಟಾಂಪನ್ನು ಕಳುಹಿಸಬೇಕು. ಇದರ ಉತ್ತರವು ದಶಂಬರ ೧೫ರೊಳಗೆ ನಮ್ಮ ಕೈಸೇರಬೇಕು.
ಕಳೆದ ಸಲದ ಬೆಳ್ಳಿಯ ಪದಕವು ನಂಬ್ರ ೬೨ಕ್ಕೆ ಸಿಕ್ಕಿದೆ.

ಮೆನೇಜರ್.

"ಬಡವರ ಬಂಧು"ವಿನ ಹಿಂದಿನ ಸಂಚಿಕೆಗಳು ನಮ್ಮಲ್ಲಿರದಿರುವುದರಿಂದ ಮುಂದಿನ ಚಂದಾದಾರರಿಗೆ ಅವುಗಳು ಸಿಗಲಿಕ್ಕಿಲ್ಲವಾಗಿ ವಿಷಾದದಿಂದ ವಿನಂತಿಸುತ್ತೇನೆ.

"ಬಡವರ ಬಂಧು"ವಿನ ವರ್ಷಾಂತ್ಯದಲ್ಲಿ ಸರ್ವಾಂಗಸುಂದರವಾದ ವಿಶೇಷ ಸಂಚಿಕೆಯೊಂದು ಹೊರಡಲಿರುವುದು.

ಶ್ರೀ ಗೋಕರ್ಣನಾಥ ಕ್ಷೇತ್ರ ಸ್ಥಾಪನಾ ಕಾರ್ಯದಲ್ಲೂ ಅದರ ಏಳ್ಗೆಯ ಸಾಧನೆಯಲ್ಲೂ ಕಳೆದ ಇಪ್ಪತ್ತು ವರ್ಷಗಳಿಂದ ತನ್ನ ತನುಮನವನ್ನು ಸಮರ್ಪಿಸಿದ ಶ್ರೀ ಕೃಷ್ಣಾನಂದ ಅಥವಾ ಕುಂಞಪ್ಪ ವೈದ್ಯರು ತಾ. ೮-೯-೩೨ರಲ್ಲಿ ಕಣ್ಣನೂರಿನ ತನ್ನ ಮನೆಯಲ್ಲಿ ಸಮಾಧಿಯಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ದೇವಸ್ಥಾನದ ಸಕಲ ಪೂಜಾವಿಧಿ ವಿಚಾರಗಳಲ್ಲಿ ಇವರು ಅತ್ಯಂತ ನುರಿತವರಿದ್ದರು. ಭಗವದ್ಗೀತೆ ವೇದಶಾಸ್ತ್ರ ಪುರಾಣಗಳಲ್ಲಿ ಬಹು ನಿಪುಣರಿದ್ದರು. ಶ್ರೀ। ಗೋಕರ್ಣನಾಥ ಕ್ಷೇತ್ರದಲ್ಲಿ ಶ್ರೀ। ತಿರುಪತಿ ವೆಂಕಟರಮಣನ ಮೂರ್ತಿಯ ಪ್ರತಿಷ್ಠಾ ಕಾರ್ಯವು ಇವರ ಆಶ್ರಯದಿಂದಲೇ ನಡೆಯಿತು. ಸರ್ವಗುಣಸಂಪನ್ನರೂ, ಸಾಧುವರ್ಯರೂ ಆದ ಇವರ ನಿಧನದಿಂದಾಗಿ ಸಮಾಜವು ಶೋಕಿಸುತ್ತಿದೆ. ಇವರ ಆತ್ಮಕ್ಕೆ ಶಾಂತಿಯಿರಲಿ!

(೩ನೇ ಪುಟದಿಂದ ಮುಂದುವರಿಸಿದ್ದು.)

ತಂದೆಯು ಹೊರಟ. ಶಿವರಾಮನನ್ನು ಚುಂಬಿಸಿ ಪೇಟೆಗೆ ನಡೆದ. ಕರಿಬೆಕ್ಕು ಅವನನ್ನು ಅಂಗಳದ ವರೆಗೆ ಹಿಂಬಾಲಿಸುತ್ತಾ 'ಮಿಯಾಂ ಮಿಯಾಂ' ಎಂದು ವಿಲಕ್ಷಣವಾಗಿ ಕೂಗಿತು.

ಆ ದಿನ ಸಾಧಾರಣ ಹನ್ನೊಂದು ಘಂಟೆಗೆ ಒಂದು ಜೋರಿನ ಮಳೆಯು ಸುರಿದು ನಿಂತಿತು. ಸುಂದರಿಯು ಅಡಿಗೆಯ ಅವಸರದಲ್ಲಿ ತಲೆಯೊಡ್ಡಿದ್ದಾಳೆ—ರಾತ್ರೆ ಕಂಡ ಭಯಂಕರ ಕನಸ್ಸನ್ನು ಮನಸ್ಸಿನಲ್ಲಿ ಪ್ರತಿಬಿಂಬಿಸುತ್ತಿದ್ದು ಒಮ್ಮೆ ಒಳಗೊಳಗೆ ಭಯವಿಹ್ವಲಳಾಗಿದ್ದು ಮುದ್ದು ಶಿವರಾಮನನ್ನು ನೆನಸುತ್ತಿದ್ದಾಳೆ. ಶಿವರಾಮನು ಗಾಡಿಯನ್ನೇ ಇದಿರು ನೋಡುತ್ತಿದ್ದಾನೆ. ರುಕ್ಮಳು ತಾಯಿಯ ಬಳಿ ಆಡುತ್ತಿದ್ದಾಳೆ.

ಶಿವರಾಮನು ಹೊರಚಾವಡಿಯಲ್ಲಿ ಆಡುತ್ತಾ ಇದ್ದ. ತನ್ನ ಬುಗರಿ ಚೆಂಡುಗಳ ಮಧ್ಯಕ್ಕೆ ಈ ಹೊತ್ತು ಸಂಜೆ ಗಾಡಿಯೊಂದು ಬರಲಿರುತ್ತದೆಂಬ ಯೋಚನೆಯು ಅವನಲ್ಲಿ ಬಲವಾಗಿ ನೆಲಸಿದ್ದಿತು. ಏಕೋ ಮೆಟ್ಟಲಿನಿಂದ ಕೆಳಗಿಳಿದ. ಕಾಲಿನಿಂದ ನೀರನ್ನು ಚಳಪಳಿಸುತ್ತ ಮುಂದಕ್ಕೆ ಹೋದ. ಅಷ್ಟರಲ್ಲಿ ಒಂದು ಕರಿ ತುಂಬಿಯು 'ಡುಂಯ್ಯಿ' ಯೆಂದು ಝೇಂಕರಿಸುತ್ತ ಅವನ ಕಿವಿ ಬಳಿಯಾಗಿ ಹಾರಿತು. ಶಿವರಾಮನ ದೃಷ್ಟಿಯು ಅದನ್ನೇ ಅನುಸರಿಸಿತು. ಅದನ್ನು ನೋಡುತ್ತಾ ನೋಡುತ್ತಾ ಅಲ್ಲಲ್ಲಿ ಒಡ್ಡಿದ್ದ ನೀರನ್ನು ಕೆದಕುತ್ತ ಮುಂದೆ ಸಾಗಿದ. ಆ ತುಂಬಿಯು ಮನೆಯ ಹಿಂಗಡೆ ಹಾರಿಹೋಯಿತು. ಶಿವರಾಮನು ಅಲ್ಲಿಗೆ ಓಡಿದ—ತುಂಬಿಯು ಕಾಣಲೊಲ್ಲದು. ಕೆಲ ನಿಮಿಷಗಳ ತನಕ ಅತ್ತ ಇತ್ತ ನೋಡಿ ನೋಡಿ, ಆ ತುಂಬಿಯನ್ನು ನಿರೀಕ್ಷಿಸಿದ. ಅದು ಬರಲಿಲ್ಲ. ಅಷ್ಟಾಗುವಾಗ ಅಲ್ಲೆ, ಬಳಿಯಲ್ಲಿದ್ದ ನೀರು ತುಂಬಿದ್ದ ಹೊಂಡದ ಕಡೆಗೆ ಅವನ ದೃಷ್ಟಿಯು ಹೋಯಿತು.

ಆರಡಿ ಉದ್ದ, ನಾಲ್ಕಡಿ ಅಗಲ ■ ಹೊಂಡ ಸುಮಾರು ಎರಡು ಮೂರಡಿ ಆಳವೂ ಇದ್ದಿತು. ಆಗಲೆ ಮಳೆ ಬಂದಿತ್ತಾದುದರಿಂದ ಅದರಲ್ಲಿ ಪುನಃ ನೀರು ತುಂಬಿ ತುಳುಕಾಡಿ ನೆಲದ ಮೇಲೂ ಹರಿದಾಡುತ್ತಿತ್ತು.

ಶಿವರಾಮನು ಒಂದು ಸಣ್ಣ ಕೋಲನ್ನು ಕೈಯಲ್ಲಿ ತೆಗೆದುಕೊಂಡು ಮೆಲ್ಲನೆ ಬಗ್ಗಿದ. ಕೋಲನ್ನು ನೀರಿಗೆ ಮುಟ್ಟಿಸಿದ. ಮೇಲೆತ್ತಿದ. ಪುನಃ ಹೊಂಡದ ಅಂಚಿನಲ್ಲಿ ಕುಳಿತ. ಕಡ್ಡಿಯೊಂದನ್ನು ನೀರಿಗೆಸೆದ— ಆಗ ಹೊಂಡದ ಅಂಚಿನಿಂದ ಒದ್ದೆ ಮಣ್ಣಿನ ಮುದ್ದೆಗಳು ಚಳಚಳನೆ ನೀರಿಗೆ ಬಿದ್ದುವು. ಶಿವರಾಮನು ತನ್ನ ಕೈಯಲ್ಲಿದ್ದ ಕೋಲನ್ನು ನೀರಿಗೆ ಪುನಃ ಮುಳುಗಿಸುವುದರಲ್ಲಿದ್ದ— ತತ್‌ಕ್ಷಣ ಅವನು ಕುಳಿತಿದ್ದ ಹೊಂಡದ ಬದಿಯು ಬುಸಾಲ್ಲನೆ ನೀರಿಗಿಳಿಯಿತು ನಿಮಿಷಾರ್ಧದಲ್ಲಿ ಶಿವರಾಮನು ಅಧೋಮುಖನಾಗಿ ನೀರಿಗೆ ಬಿದ್ದುಬಿಟ್ಟ. ಅವನ ಶಿರವು ನೀರೊಳಗೆ ಕೆಸರಿನಲ್ಲಿ ಹೂತುಹೋಯಿತು. ಬಹಳ ಕೆಸರು ಇದ್ದುದರಿಂದ ಕೈಕಾಲುಗಳೂ ಕಟ್ಟಲ್ಪಟ್ಟಂತಾದುವು. ವಾಚಕ, ನೀರಿನ ಮೇಲಿಂದ ಶಿವರಾಮನ ಒಂದು ಪಾದವು ಮಾತ್ರ ಕಾಣುತ್ತಿತ್ತು. ಅಂದರೆ ಅವನು ತಲೆಕೆಳಗಾಗಿ ಕಾಲು ಮೇಲಾಗಿ ನೀರೊಳಗೆ ಮುಳುಗಿಬಿಟ್ಟ. ಹೆಣವು ಹಾಗೆಯೇ ನಿಂತಿತು !!

ಸುಂದರಿಯ ಅಸಹನೀಯ ದುಃಖ! ರಘುನಾಥನ ಅವರ್ಣನೀಯ ಪ್ರಲಾಪ! ನೆರೆಹೊರೆಯವರ ವ್ಯಸನ! . .

. . . ."

ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

ಹಾಸ್ಯಸಂಗ್ರಹಕಾರರು ಬೇ
ಗಿದ್ದಾರೆ. ಉತ್ತಮ ಹಾ
ಗಳಿಗೆ "ಸುಸ್ವಾಗತ"ವಿದೆ.

ಡಾಕ್ಟರರು:

ಪುತ್ತೂರಿನ ವಿದ್ವಾನ್ ಮುತ್ತಂಭಟ್ಟರು, ನಿರಕ್ಷರಕುಕ್ಷಿ.

ಅತೀ ಅಗ್ಗ! **ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ.** **ನಗುವವರಿಗೆ ಧಮ**

ಉಪಾಧ್ಯಾಯ:—ರಂಗಾ! ಎಂಟು ಎಂಟ್ಲಿ ಎಷ್ಟೊ?

ರಂಗ:—ಮಧ್ಯಾಹ್ನಕ್ಕೆ ಹೇಳಿದರೆ ಆಗದೆ ಸಾರ್?

ಉಪಾಧ್ಯಾಯ:—ಅದ್ಯಾಕೊ?

ರಂಗ:—ನನ್ನ ಮಗ್ಗಿ ಪುಸ್ತಕ ಮನೆಯಲ್ಲೇ ಉಳಿದಿದೆ!

\+ + + +

ತಾಯಿ:—(ಸಿಟ್ಟಿನಿಂದ) ಯಾವ ಕತ್ತೆಗೆ ಹುಟ್ಟಿದ್ದೀಯೋ ನೀನು?

ಮಗ:—(ಸಂತೋಷದಿಂದ) ನನಗೇನು ಗೊತ್ತಮ್ಮಾ? ನೀನೆ ಬಲ್ಲೆ!

\+ + + +

ಉಪಾಧ್ಯಾಯ:—ಮಲ್ಲಯುದ್ಧವೆಂದರೇನು?

ಶಿಷ್ಯ:—ಮಲ್ಲಯುದ್ಧವೆಂದರೆ, ಕ್ಷೌರಮಾಡುವ ಮಲ್ಲರ ಜಗಳವೆಂದು ಅರ್ಥ.

\+ + + +

ಗಂಡ:—ನಡೆ! ಹುಚ್ಚು ಮುಂಡೆ! ನಾನು ಹೇಳಿದನ್ನಷ್ಟು ಮಾಡುವುದನ್ನು ಬಿಟ್ಟು ಎಷ್ಟು ಹರಟೆಯೇ?

ಹೆಂಡತಿ:—ಹುಚ್ಚಳಾದರೂ ಒಂದು ವೇಳೆ ಆಗಬಹುದು. ಆದರೆ, 'ಮುಂಡೆ' ಹೇಗಾಗಬಲ್ಲೆನೋ ನಾನರಿಯೆ!

(ಶ್ರೀ. ಕೆ. ರಾಮಯ್ಯ ಆಳ್ವ, ಕೊಡಿಯಾಲಬೈಲು)

ರೋಗಿ:—ನಾನು ನಿನಗೆ ಸಂಪೂರ್ಣವಾಗಿ ಮನಸೋತು ಹೋಗಿದ್ದೇನೆ. ಇನ್ನು ಹೆಚ್ಚು ದಿನಗಳ ವರೆಗೆ ಬದುಕುವ ಆಶೆಯಿಲ್ಲ.

ನರ್ಸ್:—ಬಲ್ಲೆ! ನಿಜವಾಗಿಯೂ ಬದುಕಲಾರೆ! ಇಲ್ಲಿಯ ಡಾಕ್ಟರರೂ ಕೂಡಾ ನನ್ನನ್ನು ಪ್ರೀತಿಸುತ್ತಾರೆ. ಅಲ್ಲದೆ ಇಂದು ಬೆಳಿಗ್ಗೆ ನೀನು ನನ್ನನ್ನು ಚುಂಬಿಸುವುದನ್ನೂ ನೋಡಿರುತ್ತಾರೆ.

(ಶ್ರೀ. ಎಮ್. ಬಿ. ಶೆಟ್ಟಿಗಾರ, ಮುಂಬಾಯಿ.)

ಇಂಗ್ಲೀಷು ಗೊತ್ತಿಲ್ಲದವ:—ಮಿತ್ರಾ! ಈಗ ಭೂಮಂಡಲದಲ್ಲಿ ಶ್ರೀಮಂತರು ಯಾರು?

ಸ್ವಲ್ಪ ಇಂಗ್ಲೀಷು ಬರುವವ:—ಈಗ ಟುಲೆಟ್ (To Let) ಸಾಹೇಬರಷ್ಟು ಶ್ರೀಮಂತರು ಬೇರೆ ಯಾರೂ ಇಲ್ಲ! ಯಾವ ಕಟ್ಟೋಣಗಳ ಗೋಡೆಗಳಲ್ಲಿಯೂ ಅವರ ಹೆಸರಿನ ಬೋರ್ಡುಗಳೇ!!

(ಶ್ರೀ. ಎಮ್. ರಘುರಾಮ, ಮುಂಬಾಯಿ.)

\+ + + +

ನ್ಯಾಯಾಧೀಶ:—ನೀನು ಈ ಮುಂಚೆ ಎಷ್ಟು ಸಲ ಅಪರಾಧಿಯಾಗಿರುವಿ?

ಅಪರಾಧಿ:—ಏಳೆಂಟು ಸಲ!

ನ್ಯಾ:—ಹಾಗಾದರೆ ಈ ಸಲ ಕಠಿಣ ಶಿಕ್ಷೆ ವಿಧಿಸುವೆನು.

ಅ:—ಕಾಯಂ ಬರುವ ಗಿರಾಕಿಗಳಿಗೆ ಸ್ವಲ್ಪ ರಿಯಾಯತಿ ತೋರುವುದು ಖಾವಂದರ ಕರ್ತವ್ಯವಲ್ಲವೇ?

\+ + + +

ತಂದೆ:—ಮಗೂ! ನೀನು ದೊಡ್ಡವನಾದ ಮೇಲೆ ಯಾರನ್ನು ಮದುವೆಯಾಗುವಿ?

ಮಗ:—ನಿಮ್ಮ ತಾಯಿಯನ್ನು.

ತಂದೆ:—ಛೆ! ಹಾಗೆನ್ನಬಾರದು ಮಗೂ.

ಮಗ:—ಅದೇಕಪ್ಪಾ? ಹಾಗಾದರೆ ನನ್ನ ತಾಯಿಯನ್ನು ನೀವೇಕೆ ಮದುವೆಯಾದುದು?

\+ + + +

ಉಪಾಧ್ಯಾಯ:—ಮರುಳು ಭೂಮಿಯೆಂದರೇನು?

ಶಿಷ್ಯ:—ಏನೂ ಬೆಳೆಯದ ಸ್ಥಳ.

ಉಪಾಧ್ಯಾಯ:—ಸರಿಯಾದ ಒಂದು ಉದಾಹರಣೆ ಕೊಡು.

ಶಿಷ್ಯ:—ನಮ್ಮಪ್ಪನ ತಲೆ.

(ಶ್ರೀ. ಸದಾಶಿವ ಐತಾಳ.)

\+ + + +

ಶಂಕರ ಭಟ್ರು:—ಹೌದ್ರಿ, ಶಂಭಟ್ರೆ! ನಿಮ್ಗೆ ಊಟ್ಯಾತ್ರಿ?

ಶಂಭಟ್ರು:—ಏನ್ರಿ! ನಾವು ಆಗಾಗ್ಗೆ ಊಟಾ ಮಾಡೋರಲ್ರಿ! ಇಂದು ಬೆಳಿಗ್ಗೆ ಕೊಂಚ ಗಂಜಿ ಉಂಡ್ರೆ ನಾಳೆ ಬೆಳಿಗ್ಗೆ ಮಾ
ಇಂದು ಮಧ್ಯಾಹ್ನ ಒಂದಿಷ್ಟು ಹೊಟ್ಟೆ ತುಂ
ಉಂಡ್ರೆ, ನಾಳೆ ಮಧ್ಯಾಹ್ನಕ್ಯಾತು; ಇಂ
ರಾತ್ರಿ ಸೊಲ್ಪ ಉಂಡ್ಬಿಟ್ರೆ ನಾಳೆ ರಾತ್ರಿಯ
ಯಿತು. ನಾವೇನು ನಿಮ್ಮಂತೆ ಹೊ
ಬಾಕ್ರೆ?

\+ + + +

ನ್ಯಾಯಾಧಿಪತಿ:—ಗಿರಿಗಿರಿತ್ತಾಯರಿಗೂ, ನೂ
ಮಹಮ್ಮದರಿಗೂ ನಡೆದ ಜಗಳ ನಿಮ
ಗೊತ್ತಿದೆಯೇ?

ಸಾಕ್ಷಿಗಾರ:—ಹೌದು ಸ್ವಾಮಿ! ನೂರ್‌ಮು
ಮ್ಮದರು ಗಿರಿಗಿರಿತ್ತಾಯರಿಗೆ ಒಂದೇ
ಕೊಟ್ಟು ನೆಲಕ್ಕೆ ಉರುಳಿಸಿಬಿಟ್ರು. ಬಳಿ
ಅವರ ಎದೆಯ ಮೇಲೆ ಕೂತು ಬೆನ್ನಿ
ಮೂರು ಗುದ್ದುಗಳನ್ನು ಕೊಟ್ರು. ಇಷ
ಮಾತ್ರ ನನಗೆ ಗೊತ್ತು.

\+ + + +

ರಾಮು:—ಕೋಳಿಗಳಿಗೆ ಮರಣ ಯಾವಾಗ?

ದೂಮು:— ಆಫೀಸರ್ರು ಗ್ರಾಮಗಳಿಗೆ ಬ
ವಾಗ!

\+ + + +

ಚಿಕ್ಕ ವಿದ್ಯಾರ್ಥಿ:—ಮೀನೆಂದರೆ ಏನು ಸಾರ್?

ಗುರು:—ಮೀನಿಗೆ ಮುಳ್ಳಿದೆ. ಅದು ಪದಾರ್ಥ
ರುಚಿಕರ.

ಚಿ. ವಿ.—ಈಗ ಗೊತ್ತಾಯಿತು ಸಾರ್! ದೀ
ಹಲಸು, ಹಲಸಿನ ಕ್ಯಾ ಮೊದಲಾದುವ
ಗಳಲ್ಲವೇ?

(The Jolly Folk.

\+ + + +

ಒಬ್ಬ:—ನನಗೆ ಎಂಟಾಣೆಯನ್ನು ದಯಮಾ
ಕೊಡಿ. ನನ್ನ ಹೆಂಡತಿಮಕ್ಕಳಿರುವ ಕ
ಹೋಗಿ ಸೇರಿಕೊಳ್ಳುತ್ತೇನೆ. ನಿಮಗೆ ಪು
ಸಿಕ್ಕುವುದು.

ಇನ್ನೊಬ್ಬ:—ಅವರೆಲ್ಲರೆಲ್ಲಿರುತ್ತಾರೆ?

ಭಿಕ್ಷುಕ:—ನಾಟಕ ಗೃಹದೊಳಗೆ.

(TIT-BITS)

ಮೈಸೂರ್ ನರ್ಸಣ್ಣನ ನರ್ತನ!

ಟಿಟ್. ಬಿಟ್ಸ್.

ನರ್ಸಣ್ಣಾಕೀ ಜೈ! ಥಕ್ಕ ಥೈ!
ನಮ್ಸಕಾರ ರಾಯ್ರೇ ,,
ಬಂದೇ ಬಿಟ್ನಿ ದೇವ್ರೇ ,,
ಎರಡೂ ಪದಾ ಹೇಳ್ತೀನೆ ,,

× × × × ×

ನಿಮ್ಮೂರ ಕಾಫಿಹೊಟ್ಲು ಥೈ ಥಕ್ಕ ಥೈ!
ಏನು ರುಚಿ! ವ್ಹ ವ್ಹ ,,
ಕೆಲವು ಹೊಟ್ಲು ಹೂಂ ಹೂಂ! ,,
ಕಾಫಿ ಚಾ ಬೆರಿಕೆ ಉಂಟು ,,
ಗ್ಲಾಸು ಸರಿ ತೊಳೆಯುವುದಿಲ್ಲ ,,
ಸಾವಿರ ಗ್ಲಾಸಿಗೆ ಕುಡ್ತೆ ನೀರು ,,
ಬ್ರಾಣ ಶೂದ್ರ ಭೇದ ತುಂಬ! ,,
ಪುಲಾ "ಬಿತೆರಿ" ಬೊಬ್ಬೆಯಬ್ಬ! ,,
"ಪುಲಾ" ಎಂದ್ರೆ ಶೂದ್ರ ಜಾತಿ! ,,
"ಬಿತೆರಿ" ಎಂದ್ರೆ ಒಳ್ಳೆ ಬ್ರಾಣ! ,,

× × × × ×

"ಸಿಂಗಲ್ ಕಾಫಿ" ಎಂದ ಕೂಡ್ಲೆ ಥೈ ಥಕ್ಕ ಥೈ
ಮುಖಾ ನೋಡಿ ಪರಿಕ್ಷೆ ರಾಜಾ ,,
ಒಮ್ಮೆ ಒಮ್ಮೆ ಪುಲಾವನ್ನು ,,
ಬಿತ್ತರಿ ಹೇಳ್ತಾರೆ ತಪ್ಪಿ ಹೋಗಿ ,,

× × × × ×

ಮೈದಾನ್ ಮೇಲೆ ಕ್ರಿಕೆಟ್ ಉಂಟು ಥೈ ಥಕ್ಕ ಥೈ!
ಸಾವಿರ ಸಾವಿರ ಜನಾ ಕೂಡ್ತೆ ,,
ಈಗ ಈಗ ಲೇಡಿಸಿ ಬರ್ತಾರೆ ,,
ಕೆಂಪು ಶೀರೆ, ನೀಲಿ ಶೀರೆ ,,
ಸಾಲುಗಟ್ಟೆ ಮೇಚ್ ನೋಡ್ತಾರೆ ,,
"ಕ್ಲೇಪು" ಹೊಡ್ದು "ಗುಡ್" ಎನ್ತಾರೆ ,,
"ವೆಲ್ ಕೊಟ್" "ಗುಡ್ ಹಿಟ್" ,,
ಎಂದು ಹೇಳ್ತಾರೆ ಎಂಥ ಕಷ್ಟ! ,,
ಬೊಂಬಾಯಿ ಮೇಲೆ ಹೀಂಗೆ ಉಂಟು— ,,
ಮೈಸೂರ ಮೇಲೆ ಹೀಂಗೆ ಇಲ್ಲ ,,
ಹಿಂದೂ ಧರ್ಮ ನೊಂದಿ ಹೋಯ್ತು— ,,
ಇಬ್ಲಿಸ್ ವಿದ್ಯೆ ಎಷ್ಟು ಅಚ್ಛಾ ,,
ಲೇಡಿಸ್ ಧರ್ಮ ಹೋಯಿತಪ್ಪ— ,,
ನಂಕಾಲ ಹೀಂಗೆ ಇಲ್ಲ— ,,
ನಿಮ್ಕಾಲ ಹಾಳು ಕಾಲ— ,,

× × × × ×

ಶೌಕತಾಲ್ರು ಬರ್ತಾರಂತೆ ಥೈ ಥಕ್ಕ ಥೈ
ಮಂಗ್ಲೂರ್ ಭಾಗ್ಯ ಭಾಗ್ಯ ಭಾಗ್ಯ—,,
ಅಂಬೆಡ್ಕಾರ್ರು ಬರ್ತಾರಂತೆ— ,,
ಮೂಂಜೆಯಾರ್ರು ಬರ್ತಾರಂತೆ— ,,
ಮಂಗ್ಲೂರಿಗೇಕೆ ಬರ್ತಾರೋ?— ,,
ಇವರ ಮಾತು ಕೇಳ್ತಾರಾರು?— ,,
ಶೌಕತಾಲ್ರೆ ಬನ್ನಿ ಬನ್ನಿ— ,,
ಅಂಬೆಡ್ಕಾರ್ರೆ ಬೇಗ ಬನ್ನಿ— ,,
ಮೂಂಜೆಯಾರ್ರೆ ಮುಂಚೆ ಬನ್ನಿ— ,,
ದೇಶವನ್ನು ಮೇಲೆ ತನ್ನಿ—ಥೈ ಥಕ್ಕ ಥೈ!
ನೀವು ಇಲ್ದೆ ಮಂಗ್ಲೂರ್ ನಾಶ!—,,

× × × × ×

ಡಾನ್ಸಿಂಗ್ ಗರ್ಲ್ಸ್ ಬರ್ತಾರೆ! ಥೈ ಥಕ್ಕ ಥೈ
ತುಂಡು ವಸ್ತ್ರ ಮೇಲೆ ಕೆಳಗೆ— ,,
ಕುಣಿಯುತ್ತಾರೆ ಥೈಯೆಂದು— ,,
ಹೀಗೆ ಕಾಸು ಮಾಡುತ್ತಾರೆ— ,,
ಜನ್ರು ನೋಡಿ ನಗುತ್ತಾರೆ— ,,
ಮಂಗ್ಲೂರ್ ಜನ್ರೆ ಏನು ಇದೂ? ,,
ಧರ್ಮ ಹೋಯ್ತು ಕರ್ಮ ಬಂತು!!— ,,

× × × × ×

ಏನು ಕಷ್ಟ! ಏನು ಕಷ್ಟ ಥೈ ಥಕ್ಕ ಥೈ
ಮೊನ್ನೆ ನೋಡಿ ಲೇಡಿಸ್ ಕೆಲ್ರು—,,
ಗುಜ್ರಾಥ್ ಹೊಟ್ಲು ಹೊಕ್ಕಿ ಬಿಟ್ರು—,,
ದೇವ್ರೆ ದೇವ್ರೆ ನಾನು ಕಾಣೆ— ,,
ಹುಡಿಗೀರು ಹೊಟ್ಲು ಹೊಗುದು!— ,,
ಒಳ್ಳೆ ರೂಢಿ ಮಂಗ್ಲೂರ್ ಜನ್ರೆ— ,,
ಇನ್ನು ಮೇಲೆ ಸಿಕ್ರೆಟ್ ಎಳೆರಿ— ,,
ಬಾಕಿ ಯಾವ್ದು ಬೇಡ ಕೇಳಿ— ,,
ಗಂಡಸ್ರಂತೆ ಲೇಡೀಸ್ ಬೇಕು— ,,
ಗಂಡಸ್ರಂತೆ ಮಾಡಿ ನೋಡಿ! ,,
ಮೀಸೆ ಗಡ್ಡ ಬಂದು ಹೋಗ್ತೆ— ,,
ಮತ್ತೆ ನೋಡಿ! ರಾತ್ರೆ ಹಗ್ಲು— ,,
ಊರು ಕೇರಿ ತಿರುಗಾಬೇಕೂ— ,,
ಸಾಕು ಪದಾ ಥೈ ಥೈಯ್ಯಾ—ಥೈ ಥಕ್ಕ ಥೈ

× × × × ×

ಈಗ ನೋಡಿ ಹೆಂಗುಸ್ರು ಗಂಡಸ್ರಂತೆ ಗಂಡಸ್ರು ಹೆಂಗುಸ್ರಂತೆ ಫೆಶನ್ ಮಾಡ್ತಾರೆ. ಹೆಂಗಸ್ರ ಜಕೀಟ್ ಬೋಡಿಸ್‌ಗಳು ಸಣ್ಣ ಸಣ್ಣದಾಗುತ್ತೆ. ರಿಟ್ರೆಂಚ್‌ಮೆಂಟ್ ಅಲ್ವೆ! ಕೈಲೀ ಕಾಸಿಲ್ಲಾ! ಹಾಂಗೆ ಗಂಡಸ್ರ ಕೋಟುಗಳು ಹಿಂದಿನಿಂದ ಸಣ್ದು ಸಣ್ದು ಆಗುತ್ತಿವೆ. ತರುಣ್ರು ಮೀಸೆ ಬೋಳ್ಸಿ ಕೋಪ್‌ಮಾಡಿ ಪೌಡರ್ ಹಚ್ಚಿ ಮೇಂಟ್‌ಗಾರಿಕೆ ಮಾಡ್ತಾರೆ. ಹುಡುಗೀರು ಭಾರೀ ಧೈರ್ಯದಿಂದ „ರಿಫೋರ್ಮರ್" ಆಗಿಕೊಂಡು ಬೀದಿ ಬೀದಿ ತಿರುಗುತ್ತಾರೆ. ಅಲ್ಲಾ ಹೆಂಗುಸ್ರು ಮನೇ ಬಿಡಬಾರ್ದು ಎಂದು ನಾನು ಹೇಳ್‌ಲಾರೆ. ಆದ್ರೂ ಪುರುಷಧರ್ಮ ಸ್ತ್ರೀಧರ್ಮ ಎಂಬುದು ಇದೆ. ಅದ್ರ ಪ್ರಕಾರ ನಡೇಬೇಕು. ನಾವು ಮಾಡ್ವ ಆಚಾರದಲ್ಲಿ ಲೋಕಾಪವಾದ ಬರ್‌ಬಾರ್ದು ಮಾನಮರ್ಯಾದೆ ಕಾಯ್‌ಬೇಕು. ಇದು ನನ್ ಕಾಲದ ಮರ್ಜಿ.

× × × × ×

ಏನ್ರಯ್ಯಾ! „ಉತ್ತಮ ಜಾತಿಯವ್ರ ಗ್ರಾಗತಿ ತಿರುಗಿ ನಿಂತಿತಲ್ಲ? ಈಗ ಪತಿತ ಜನ್ರಿಗೆ, ಹಿಂದೂಗಳೇ ದಮ್ಮಯ್ಯ ಹಾಕೋ ಕಾಲಾ ಬಂತಲ್ಲ? ಗಾಂಧಿಯವ್ರು "ನಾನು ಉಪವಾಸಬಿದ್ದು ಸಾಯ್ತೀನೆ!" ಎಂದು ಹೇಳಿ ಬಿಟ್ದೇ ತಡ! ಎಲ್ರಿಗೂ ಚಲಿಜರ ಹಿಡೀತು!!! ಒಂದು ಅತ್ತೇ ಕಾಲ! ಒಂದು ಸೊಸೇ ಕಾಲ ತಿಳೀತೇ!?

× × × ×

ಉತ್ತಮ ಜಾತಿಯವ್ರು ಕೀಳು ಜಾತಿಯವ್ರಿಗೆ ಇಷ್ಟು ಕಾಲದಿಂದ್ಲೂ ಕೊಡುತ್ತ ಬಂದ ಮಹಾ ಪಾಪ್ಕಾಗಿ ಪ್ರಾಯಶ್ಚಿತ್ತವನ್ನನ್ಭವಿಸಲು ಬಾಪೂಜೀಯವ್ರೇ ಬೇಕಾಯ್ತು ಅಯ್ಯಾ ಗಾಂಧಿಯವ್ರೇ, ಮಹಾತ್ಮಾ ಗಾಂಧಿಯವ್ರೇ ನೀವು ಬಡವರ್ಗೆ ಮಾಡ್ದ ಮಹಾದುಪ್ಕಾರವನ್ನು ಏಳು ಲೋಕಗಳಲ್ಲೂ ಮರೆಯೆವು! ನಿಮ್ಮಂತ್ವ ಬಡವ್ರ ಬಂಧು ಲೋಕ್ದಲ್ಲಿ ಯಾರು?

× × × ×

ಮಿ। ಅಂಬ್ಡೊಕಾರ್ರೇ, ಅಲ್ಲ ಡಾ। ಅಂಬೆಡ್ಕಾರ್ರೇ ಇಂತಹ ಬಿಸಿ ಬಿಸಿ ಅಂಬೊಡೆಯನ್ನು ಉತ್ತಮ ಜಾತಿಯವರ್ಗೆ ನಿಮ್ಮ ಸೆಪರೇಟ್ ಇಲೆಕ್ಟೊರೇಟ್ ಕಾವ್ಲಿಯಲ್ಲಿ ಹಾಕಿ ಹುರ್ದು ಕೊಟ್ಟೆ ನೀವೇ ಧನ್ಯರು! ಆದ್ರೆ ಒಂದು ಮಾತ್ರ ನೆನಪಿರ್ಲಿ! ನಿಮ್ಮ ಹಟದಿಂದ ಅಸ್ಪೃಶ್ಯರಿಗೆಷ್ಟು ಪ್ರಯೋಜನವಿದ್ಯೋ ಅದ್ಕಿಂತ ಲಕ್ಷ ಲಕ್ಷ ಪಾಲು ಅಪ್ರಯೋಜನ ಗಾಂಧಿಜೀಯವ್ರ ಮರಣದಿಂದಿದೆ! ಇದು ಗೊತ್ತಿಲ್ಲಿ! ಹಿಂದೂಗಳೊಡ್ನೆ ರಾಜ್ಗೆ ಬನ್ನಿ! ಜೈ ಅಂಬ್ಡೊಕಾರಕೀ ಜೈ! ಜೈ!! ಜೈ!!! ಜೈ ಶೌಕತಾಲ್ಕೀ ಜೈ—ಮೆಕ್‌ಡೊನಾಲ್ಡ್ಕೀ! ಜೈ, ಹೋರ್ ಸಾಹೇಬ್ಕೀ! ಜೈ, ಲೋಡ್ರ್ ವಿಲ್ಲಿಂಗ್ಡನ್ ಅಜ್ಜಕೀ!!!

× × × ×

ಅಸ್ಪೃಶ್ಯರ ಪ್ರವೇಶ್ಕಾಗಿ ಕಲ್ಕತ್ತೆ, ಮುಂಬಾಯಿ, ಬೆನಾರಿಸ್, ಕರಾಚಿ, ಮೊದಲಾದ ಕಡೆಗಳಲ್ಲಿ ದೇವಸ್ಥಾನಗಳ ಬಾಗ್ಲನ್ನು ತೆರ್ದೇ ಬಿಟ್ರು. ಪಾಪ! ಈ ದೇವಸ್ಥಾನಗಳ ಭಟ್ರುಗಳ್ಗೆ ಎಷ್ಟು ದುಃಖವಾಗ್ರಬೇಕು? ತಮ್ಮ ಬ್ರಾಹ್ಮಣ್ಯವು ನಾಶವಾದಕ್ಕೆ ಇವ್ರು ಪ್ರಲಾಪಿಸ್ತುದಿಲ್ವೇ? ಅಯ್ಯಾ ಗಾಂಧಿಯವ್ರೆ ನಿಮ್ಮ ಕಾರ್ ಬಾರೇ!!!

× × × ×

ಮಂಗ್ಲೂರ್ಲಿ ಒಂದು ಸಹಭೋಜನ್ವು ನಡೆಯಿತು. ಬಾಹ್ಯದೃಷ್ಟಿಗೆ ಎಲ್ಲವೂ ಕೊಸ್ಮೊಪೊಲ್ಟಿನ್! ಅಂತರ್ ದೃಷ್ಟಿಗೆ ಕಣ್ಣ್ಕಟ್ಟು! ಬ್ರಾಹ್ಮಣ್ರೂ ಶೂದ್ರರೂ ಒಟ್ಕೊಡಿ ಊಂಟ ಮಾಡಿದ್ರೆ ಗಾಂಧ್ಗೆ ಕುಶೀಯಾದೀತೆಂದು ನೆನಸ್‌ಬ್ಯಾಡಿ. ಅವರ್ಗೆ ಶೇಡೋ ಬೇಡಾ! ಸಬ್ಸ್‌ಟೆನ್ಸ್ ಬೇಕಾದ್ದು. ಅನ್ಯಾಯ ಮಾಡ್ದವ್ರು ಅನ್ಯಾಯ್ದಿಂದ ಸಾಯ್ತಾರೆ. ನ್ಯಾಯ ಮಾಡ್ದವ್ರು ನ್ಯಾಯದಿಂದ ಬದುಕ್ತಾರೆ. ಸತ್ಯಮೇವ ಜಯತೇ ನಾನೃತಂ.

× × × ×

ಗಾಂಧಿಜೀಯವರು ತನ್ನ ಉಪವಾಸ ವೃತವನ್ನು ಬಿಡ್ವ ಪ್ರಸಂಗವೊದಗಿದೆ. ಭಾರೀ ಸಂತೋಷ! ತಮ್ಮ ತಮ್ಮ ಕಾರ್ಯವಾದ ಮೇಲೆ ಹಿಂದೂಗಳು ಸುಮ್ಮಗಿದ್ದು ಬಿಡುವರೇ! ಪ್ರಿಯ ಹಿಂದೂಗಳೇ! ನಿಮ್ಮ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನನುಭವಿಸಿ ಅಸ್ಪೃಶ್ಯರನ್ನು ಪ್ರೀತಿಸಿರಿ.

\+ × + +

A mind quite vacant is a mind quite distressed.

ಮಹಾತ್ಮಾಗಾಂಧಿಯವರು ರಕ್ಷಿಸಲ್ಪಟ್ಟರು!

—ಕಡಪಾದಲ್ಲಿ ಒಬ್ಬ ಸುಪ್ರಸಿದ್ಧ ಸನ್ಯಾಸಿಯು ರಾತ್ರೆ ಒಂದು ಅಂಗಡಿಗೆ ಮೆಲ್ಲನೆ ನುಗ್ಗಿ, ಕಣ್ಣಹಾಕಿ ಎರಡು ಸಾವಿರ ರೂಪಾಯಿಗಳ ವಸ್ತುಒಡವೆಗಳನ್ನು ಸಾಗಿಸುತ್ತಿದ್ದಾಗ ಸಿಕ್ಕಿಬಿದ್ದನು. ಇವನಲ್ಲವೆ ಬೆಕ್ಕುಸನ್ಯಾಸಿ? ಇಂತಹ ಎಷ್ಟು ಮಂದಿಗಳಿಲ್ಲ?

—ಪೊಂಡಿಚೇರಿಯ ವಿರಾಮವೆಂಬಲ್ಲಿ ಮಾರಿಯಮ್ಮನ ರಥೋತ್ಸವವು ನಡೆದು ವಿರಾಮಹೊಂದಿತು. ಹಿಂದೆ ನೋಡುತ್ತಾರೆ—! ರಥದ ಚಕ್ರದಡಿಗೆ ಒಬ್ಬ ಮಾರಿ ಭಕ್ತನು ಬಿದ್ದು ಪರಲೋಕಕ್ಕೇರಿದ್ದನು! ಹಾ ಭಕ್ತ!

—ಬೆಂಗಳೂರಿನ “ತಾಯ್ನಾಡು” ದೈನಂದಿನ ಪತ್ರಿಕೆಯು ತನ್ನ ಐದನೇ ವರ್ಷದ ವರ್ಧಂತಿಯನ್ನು ತಾರೀಕು ೧೧—೯—೧೯೩೨ರಲ್ಲಿ ಜರಗಿಸಿತು. ಹೊತ್ತು ಮೀರಿದರೂ ನಾವೂ ಅದನ್ನು ಅಭಿನಂದಿಸದಿರೆವು.

—ಬರ್ಮಾದಲ್ಲಿನ ಚೀನೀಯ ಸ್ತ್ರೀಯೊಬ್ಬಳು ತನ್ನ ಗಂಡನ ಅಸ್ವಸ್ಥವು ನಿವಾರಣೆಯಾಗಬೇಕೆಂಬ ಹಟದಿಂದ ವೈದ್ಯರ ಹೇಳಿಕೆಯಂತೆ ತನ್ನ ದೇಹದ ಒಂದು ತುಂಡು ಮಾಂಸವನ್ನು ಕಡಿದು, ಅದನ್ನು ಪದಾರ್ಥಮಾಡಿ ಪತಿಗೆ ಬಡಿಸಿ, ಅವನನ್ನು ಬದುಕಿಸಲೆತ್ನಿಸಿದಳು! ಸಾವಿತ್ರಿಬೇಕೆ?

—ಜಬ್ಬಲ್‌ಪುರದಲ್ಲಿ ರೇಗೋ ಎಂಬವರನ್ನು ಯಾರೋ ಕೊಂದರಂತೆ. ಕೊಲೆ ನಡೆಯುವಾಗ ಅವರ ಪ್ರಿಯ ಪತ್ನಿಯು ಸಿನೆಮ ಮಂದಿರದಲ್ಲಿದ್ದಳಂತೆ. ಆ ಪ್ರಿಯ ಹೆಂಡತಿಯು ತಮ್ಮ ಕಾರ್ ಡ್ರೈವರನಿಗೆ ಒಂದು ತುಂಡು ಆಸ್ತಿಯನ್ನೇ ಗುಟ್ಟಾಗಿ ಕೊಟ್ಟಿದ್ದಳಂತೆ. ಈಗ ಡ್ರೈವರನೂ ಪ್ರಿಯ ಪತ್ನಿಯೂ ಸಿಕ್ಕಿಬಿದ್ದಿರುವರಂತೆ. ಎಂತಹ ಪ್ರಿಯಪತ್ನಿ?

—ಬಂಗಾಳದ ಸಮೀಪ ಧುಲಾಗ್ರಾಮ ಎಂಬಲ್ಲಿ ಒಂದು ದೊಡ್ಡ ಹಾವು ಮೊಟ್ಟೆಗಳನ್ನಿಡದೆ ಮರಿಗಳನ್ನಿಟ್ಟ ವಾರ್ತೆ ಬಂದಿದೆ. ಇನ್ನು ಗಂಡಸರು ಹೆರಬಾರದೇಕೆ?

—ಮುಂಬಾಯಿಯಲ್ಲಿ ವೈಷ್ಣವ ಪುರೋಹಿತರೊಬ್ಬರ ಪುತ್ರರಾದ ಶ್ರೀ ದಾಮೋದರ್ ಲಾಲ್‌ಜಿ ಎಂಬವರು ಡಿಲ್ಲಿಯ ನರ್ತಕಿಯೊಬ್ಬಳನ್ನು, ಪ್ರೇಮಿಸಿ, ವಿವಾಹವಾಗಿಯೇ ಬಿಟ್ಟರು! ಅವರನ್ನು ಜಾತಿಯ ಗ್ರಹಸ್ಥರು ಬಹಿಷ್ಕರಿಸುವರೆಂದು ತಿಳಿದುಬರುತ್ತದೆ. ಬೇರೆ ಕೆಲಸವಿಲ್ಲವೇ?

—ಹಾಲುಮುತ್ತೂರಿನ ಬಳಿ ಒಂದು ಪ್ರದೇಶದಲ್ಲಿ ೮೦ ದನಗಳಿಗೆ ಸಿಡಿಲು ಬಡೆದು ೪೭ ದನಗಳು ನಿಂತಲ್ಲಿಯೇ ಮೃತವಾದುವು.


—ಗ್ವಾಲಿಯರ್ ಸಂಸ್ಥಾನದ ಎಲ್ಲಾ ಪೋಲೀಸರು ಖಾದಿಯುಡಬಹುದೆಂದೂ, ಸ್ವದೇಶದಲ್ಲೇ ತಯಾರಾಗುವ ಪಾದರಕ್ಷೆ ಮೊದಲಾದುವುಗಳನ್ನುಪಯೋಗಿಸಬಹುದೆಂದೂ ಸರಕಾರವು ಒಪ್ಪಿದೆಯಾಗಿ ತಿಳಿದುಬಂದಿದೆ. ‘ಭದ್ರಂ ಶುಭಂ ಮಂಗಲಂ!!!’

— ಆಗ್ರಾ ಜಿಲ್ಲೆಯಲ್ಲಿ ಒಬ್ಬಳು ಪತ್ನಿಯು ತನ್ನ ಪತಿಯೊಡನೆ ಸಹಗಮನವನ್ನು ಮಾಡಬೇಕೆಂದು ಬಗೆದಳು. ನೋಟವನ್ನು ನೋಡಲು ಸಾವಿರಾರು ಜನರು ಕೂಡಿದರು. —ಪೋಲೀಸರು ಅವಳನ್ನು ತಡೆದರು – ಜನರಿಗೆ ಸಿಟ್ಟಿದ್ದಿತು. ಪೋಲೀಸರಿಗೆ ಹೊಡೆದು ಅವಳನ್ನು ಚಿತೆಗೇರಿಸಲೆತ್ನಿಸಿದರು! ಸಹಗಮನವನ್ನು ನೋಡಲು ತವಕಿಸಿದ ಕಣ್ಣುಗಳು ಸಹಗಮನ ಮಾಡುತ್ತಿದ್ದರೆ ಶ್ರೇಯಸ್ಸಾಗುತ್ತಿತ್ತು!

–ಲಾಹೋರಿನಲ್ಲಿ ರೋಬರ್ಟ್ ಸೋಯರ್ ಎಂಬ ವೈಮಾನಿಕನು ಸೈಕಲ್ ಸವಾರಿ ಸಮಯದಲ್ಲಿ ಬಿದ್ದು ಕೈಗೆ ಮಾತ್ರ ಘಾಯವಾಯಿತು. ಮಧ್ಯಾಹ್ನವಾಗುತ್ತಲೇ ಅವನು ಮೃತಹೊಂದಿದನು! ಕಾರಣ?

—ಮುನಿಸಿಪಲ್ ಕೌನ್ಸಿಲರುಗಳೂ ಲಂಚ ಹೊಡೆಯುತ್ತಾರೆ! ಪೂನದಲ್ಲಿ ಸತ್ಪುತೆ, ಸಿಂಧೆ, ಅಬ್ದುಲ್ ಖಾದರ್ ಎಂಬ ಮೂವರು ಮುನಿಸಿಪಲ್ ಕೌನ್ಸಿಲರುಗಳು ಲಂಚ ಹೊಡಿಯಲೆತ್ನಿಸಿದರೆಂಬ ಅಪಾದನೆಯಲ್ಲಿ ಕೋರ್ಟಿಗೆ ಬಲಿಬಿದ್ದರು.

—ಕಳೆದ ತಿಂಗಳಲ್ಲಿ ಬೆಂಗಳೂರಿನಲ್ಲಿ ಹಿಂದೂ ಮಹಾಸಭೆಯ ಗಣಪತಿಯು ಊರವರ ಮೆರವಣಿಗೆಯಲ್ಲಿ ನಡೆಯಿತು. ಏನೂ ಗಲಾಟೆಯಾಗಲಿಲ್ಲ!



ಇದೇ ಅಕ್ಟೋಬರ ತಾರೀಕು ೬ರಿಂದ ೯ನೇ ದಿನದ ವರೆಗೆ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ವಿದ್ಯಾದಶಮಿ ಮಹೋತ್ಸವವು ಅತಿ ವಿಜೃಂಭಣೆಯಿಂದ ಜರಗಲಿರುವುದು. ಇದನ್ನು ಸಾಂಗವಾಗಿ ನೆರವೇರಿಸಲು ಪ್ರತ್ಯೇಕ ಕಮಿಟಿಯು ಏರ್ಪಡಿಸಲ್ಪಟ್ಟಿದೆ. ಶಾಲೆಯ ಹಿತಕಾಂಕ್ಷಿಗಳೂ ಸರ್ವ ಹಳೆ ವಿದ್ಯಾರ್ಥಿಗಳೂ ತಮ್ಮ ತನು ಮನಧನದಿಂದ ಈ ಸಮಾರಂಭವನ್ನು ಜಯಪ್ರದವನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

–ನಾಗಪುರದ ಪ್ರಾಥಮಿಕ ಶಾಲೆಗಳಲ್ಲಿ ಕೈನೂಲನ್ನು ತೆಗೆವ ಮತ್ತು ಕೈಮಗ್ಗ ಕೆಲಸವನ್ನು ಕಲಿಸುವ ಏರ್ಪಾಡಾಗಬೇಕೆಂದು ವಿದ್ಯಾಮಂತ್ರಿಗಳು ಅಪ್ಪಣೆಕೊಟ್ಟರು. ಬಹಳ ಸಂತೋಷ.

—ಮಹಾತ್ಮಾಗಾಂಧಿಯವರ ವಿಶ್ವರೂಪಶಕ್ತಿಯು ತಾ. ೨೮—೯—೧೯೩೨ರಿಂದ ಪ್ರಾರಂಭವಾಗಿ ಒಂದು ವಾರದ ತನಕ ಪ್ರಪಂಚದಲ್ಲಿ ಅನೇಕ ಮಹದಾಶ್ಚರ್ಯದ ಕೆಲಸಗಳನ್ನು ಮಾಡಲಿದೆಯೆಂದೂ, ಅವರ ಜಾತಕದ ಮೇರೆಗೆ ಈಗ ಗುರುವು ಏಕದಶ ಗ್ರಹದಲ್ಲಿರುವನೆಂದೂ ಲಾಹೋರಿನ ಡಾ। ಲಕ್ಷ್ಮೀಶ ಹಾಯ್ ಎಂಬವರ ಪ್ರವಾದ. ಕಾಲಕ್ಕೆ ತಕ್ಕ ಕೋಲವೋ ಈ ಜ್ಯೋತಿಷ್ಯರದು?

—ಮೈಸೂರಿನ ಕಂದಾಯ ಮತ್ತು ಹಣ ಕಾಸಿನ ಸಮಿತಿಯವರು ಪ್ರಥಮ ಸಚಿವರಾದ ರಾಜಕಾರ್ಯ ಪ್ರಸಕ್ತ ದಿವಾನ್ ಬಹದೂರ್ ಶ್ರೀ. ಎಮ್. ಎನ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ತಾ. ೧೪ — ೯ — ೧೯೩೨ರಲ್ಲಿ ಸಭೆಸೇರಿ ಸರಕಾರದವರು ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಠರಾವುಮಾಡಿಕೊಂಡರು.

—ಬೆಂಗಳೂರು ನಗರ್ತ ಪೇಟೆಯಲ್ಲಿ ಯುವಸಂಘದವರು ಶ್ರೀ। ವೇಣುಗೋಪಾಲಕೃಷ್ಣಸ್ವಾಮಿಯವ ದೇವಸ್ಥಾನದಲ್ಲಿ ಬೆಂಗಳೂರು ಸಿವಿಕ್ ಮತ್ತು ಸೋಶಿಯಲ್ ಪ್ರೋಗ್ರೆಸ್ ಎಸೋಸಿಯೇಶನ್ ಎಂಬ ಪೌ ಸಾಮಾಜಿಕ ಸಂಘದವರ ಗರ್ಭಿಣಿ ಮತ್ತು ಶಿಶುಸಂರಕ್ಷಣಿ ಸಮಿತಿಗೆ ದಿವಾನ್ ಸಾಹೇಬರವರ ಪತ್ನಿಯ ರಾದ ಲೇಡಿ ಮಿರ್ಜಾ ಇಸ್ಮಾಯಿಲರು ಮೊನ್ನೆ ಭೇಟಿ ಕೊಟ್ಟರು. ಬಡವರ ಮಕ್ಕಳಿಗೆ ಹಾಲುಕೊಟ್ಟು ಸಾಕು ಸಂಸ್ಥೆಯನ್ನು ನೋಡಿ ಶ್ರೀಮತಿಯವರು ಸಂತೋಷ ಗೊಂಡರು.

—ಮಂಗಳೂರಲ್ಲಿ ದಕ್ಷಿಣಕನ್ನಡ ಸ್ವದೇಶಿ ಪ್ರಚಾರಕ ಸಂಘದವರ ಪರವಾಗಿ “ಸ್ವದೇಶಿ ಪ್ರಚಾರಕ”ವೆಂಬ ಮಾಸಿಕವು ಹೊರಡಲಿದೆ. ವಾರ್ಷಿಕ ಚಂದಾ ಒಂದು ರೂಪಾಯಿ. ಸರ್ವರೂ ಪ್ರೋತ್ಸಾಹಿಸಬೇಕು.

—ಮಹಾತ್ಮಾ ಗಾಂಧಿಯವರು ತನ್ನ ಉಪವಾಸ ದೀಕ್ಷೆಯನ್ನು ಬಿಡುವ ಪ್ರಸಂಗವು ಡಾ। ಅಂಬೆಡ್ಕಾರ ಮೊದಲಾದವರೊಳಗಿನ ಸಂಧಿಯಿಂದಾಗಿ ಒದಗಿದೆ. ಸ್ಪೃಶಾಸ್ಪೃಶ್ಯತೆಯು ಮಾಯವಾಗಿ ಗಾಂಧಿಜೀಯವರು ಚಿರಾಯು ರಾರೋಗ್ಯರಾಗಿ ಹಿಂದೂದೇಶ ಬ್ರಿಟನುಗಳೊಳಗೆ ಶಾಂತಿ ಯಾಗಲಿ!

ತಾ. ೨೦—೯—೧೯೩೨ನೇ ದಿನ ಶ್ರೀ ಗೋಕರ್ಣ ನಾಥ ಕ್ಷೇತ್ರದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಸಮಾಧಿದಿನವಾಚರಿಸಲ್ಪಟ್ಟಿತು. ಪೂಜೆ ಭಾಷಣಗಳು ನಡೆದಿದ್ದುವು.

—ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನವನ್ನು ಬ್ರಿಟಿಷ ಸರಕಾರದವರು ಶಿಫಾರಸು ಮಾಡಲಿದ್ದಾಗ, ಅಂತಹ ಶಿಫಾರಸಿನಿಂದಾಗಿ ಹಿಂದೂತ್ವವೇ ನಾಶವಾಗುವುದೆಂದು ಕಂಡುಕೊಂಡ ಮಹಾತ್ಮಾಜೀಯವರು ಅದರ ನಿಷೇ ಧಾರ್ಥವಾಗಿ ಮರಣಾಂತ್ಯದ ತನಕ ಉಪವಾಸವನ್ನು ತಾ. ೨೦—೯—’೩೨ರಿಂದ ಪ್ರಾರಂಭಿಸಿದರಷ್ಟೆ. ಈಗ ಅಸ್ಪೃಶ್ಯರ ಪ್ರತಿನಿಧಿಗಳಾದ ಡಾ। ಅಂಬೇಡ್ಕಾರರಿಗೂ ಗಾಂಧಿಜೀಯವರಿಗೂ ಸಂಧಿಯಾಗಿ ಗಾಂಧಿಜೀಯವರು ತನ್ನ ಪ್ರತಿಜ್ಞೆಯನ್ನು ಹಿಂತೆಗೆದಿದ್ದಾರೆ.

—ಗಾಂಧಿ ಅಂಬೇಡ್ಕರರ ಒಪ್ಪಂದವು ಪ್ರಧಾನ ಮಂತ್ರಿಗಳಿಗೆ ತಿಳುಹಿಸಲ್ಪಟ್ಟು ಅವರ ಅಪ್ಪಣೆಯು ಬಂದಿದೆ. ಗಾಂಧಿಜೀಯವರ ಉಪವಾಸವು ಕೊನೆಗೊಂಡುದರಿಂದ ದೇಶವೆಲ್ಲಾ ಆನಂದಾವೃತವಾಗಿದೆ.

—ಮೌಲಾನಾ ಶೌಕತಾಲಿಯವರು ತನ್ನ ಭಾಷಣ ಪ್ರಚಾರಮಾಡುವುದಕ್ಕಾಗಿ ಅಮೇರಿಕಕ್ಕೆ ಹೊರಟಿದ್ದಾರೆ ಮಂಗಳೂರಿಗೇಕೆ ಬರುವುದಿಲ್ಲವೋ?

—ಶೌಕತಾಲಿಯವರ ಲೆಕ್ಚರುಗಳಿಗೆ ಕ್ರಯವಿದೆ. ಒಂದು ಉಪನ್ಯಾಸಕ್ಕೆ ಇಂತಿಷ್ಟೇ ದರ ಎಂದು ನಿರ್ಣಯವಾಗಿದೆ. ಪರನಿಂದೆಗೆ ಬೆಲೆಯುಂಟು!

Mans' fortunes are according to his pains.

Reg. No. M. 2771. "ಬಡವರ ಬಂಧು" ಮಂಗಳೂರು.

Printed by V. S. Kamath at the Sharada Press, Mangalore and published by Mangalore Jarappa at the Badavara Bandhu Office, Hampankatta, Mangalore